ಸಾಧಾರಣ ನಿಬಂಧನೆಗಳು.

	ಕಾರ್ಯ	ಪುಟ.
ಜುರ್ಮಾನೆಗಳನ್ನು ಕುರಿತು ಪ್ರಕಟನೆ.	231	65
ತೆರಿಗೆ ಹಾಕಲ್ಪಡುವದು ವಗೈರೇದಕ್ಕೆ ಅರ್ಹವಾದ ಮನುಷ್ಯರನ್ನು ಸರ್ವೆ ಮಾಡುವದಕ್ಕೆ ಅಧಿಕಾರ.	232	65
ಸ್ಥಳಗಳು, ವಸ್ತುಗಳು, ಅಥವಾ ಜಂತುವುಗಳು, ಯಿವುಗಳನ್ನು ತನಿಖೀ ಮಾಡುವದಕ್ಕೆ ಅಧಿಕಾರ.	233	65
ಮ್ಯುನಿಸಿಪಲ್ ಆಫಿಸರಗಳು ತಮ್ಮ ಕೆಲಸವನ್ನು ನಡಿಸುವದರಲ್ಲಿ ಆಟಂಕ ಮಾಡಿದರೆ ಜುರ್ಮಾನೆ	234	66
ಸರ್ವೆ ವಗೈರೆಗಳ ಸಾದರಾತಿ	235	66
ಕಮ್ಮಿಷನರುಗಳು ಫಿರ್ಯಾದುಗಳನ್ನು ನಡಿಸುವಂತೆ ಮಾಡಬಹುದು.	236	66
ಕಾರ್ಮ್ ಲಾ ಯಂಬ ಸಾಧಾರಣ ಧರ್ಮಶಾಸ್ತ್ರದ ಪ್ರಕಾರ ಪೂರ್ವಪ್ರವರ್ತಕಾರಿಯಾಗಿ ಯಿರುವಂತೆ ಭಾವಿಸಲ್ಪಡತಕ್ಕದ್ದಾಗಿ ಯಿರುವ ಯಾವದಕ್ಕೂನ್ನೂ ಈ ಕಾನೂನು ಹಾನಿಕರವಾಗಿ ಯಿರಕೂಡದು.	237	66
ವ್ಯಾಜ್ಯವನ್ನು ತರುವದಕ್ಕಾಗಿ ಯಿರುವ ಕಾರಣವನ್ನು ಕುರಿತು ನೋಟೀಸು ಕೊಟ್ಟನಂತರ ಒಂದು ತಿಂಗಳು ಆಗುವವರಿಗೂ ಕಮ್ಮಿಷನರ್‌ಗಳ ಮೇಲಾಗಲೀ ಅವರ ಆ ಆಫಿಸರ್‌ಗಳ ಮೇಲಾಗಲೀ ವ್ಯಾಜ್ಯ ತರಲ್ಪಡ ಕೂಡದು.	238	66–67
ಮ್ಯುನಿಸಿಪಲ್ ಸ್ವತ್ತಿನ ವಳಗಿನಿಂದ 'ಕಂಪೆನ್‌ಷೇಷ್ಠ ಎಂಬ ಪರಿಹಾರದ್ರವ್ಯವನ್ನು ಕೊಡುವದಕ್ಕೆ ಅಧಿಕಾರ,	239	67
ಲೈಸೆನ್ಸು ವಗೈರೇಗಳನ್ನು ಕೊಡುವದಕ್ಕೆ ರುಸುಮುಗಳು.	240	67
ನಷ್ಟಗಳನ್ನು ಖರ್ಚುಗಳನ್ನು ಯಾವ ಪ್ರಕಾರ ನಿಶ್ಚಯಿಸತಕ್ಕದ್ದು.	241	68
ಸಿವಿಲ್ ಕೋರ್ಟಿನ ಮುಂದೆ ನಡವಳಿತನಡಿಸತಕ್ಕ ಪದ್ಧತಿ.	242	68
ಜಪ್ತಿ ಮಾಡುವದರ ದೆಸೆಯಿಂದ ನಷ್ಟವನ್ನು ಬರಮಾಡಿಕೊಳ್ಳುವಿಕೆ.	243	68
ಕಮ್ಮಿಷನರುಗಳು ಜಪ್ತಿ ದೆಸೆಯಿಂದ ಹಣವನ್ನು ಬರಮಾಡಿಕೊಳ್ಳುವದಕ್ಕೆ ಬದಲಾಗಿಯಾಗಲಿ ಜಪ್ತಿ ದೆಸೆಯಿಂದ ದ ಹಣ ಬಾರದ ಪಕ್ಷದಲ್ಲಿಯಾಗಲಿ ಯುಕ್ತವಾದ ಯಾವ ಕೋರ್ಟಿನಲ್ಲಿ ಯಾದರು ದಾವೆ ತರ ಬಹುದು.	244	68
ಜುರ್ಮಾನೆಗಳನ್ನು ಅಪರಾಧಗಳನ್ನು ಬರಮಾಡಿ ಕೊಳ್ಳುವಿಕೆ.	245	68
ಜುರ್ಮಾನೆಗಳನ್ನು ಅಪರಾಧಗಳನ್ನು ಹ್ಯಾಗೆ ವಿನಿಯೋಗ ಪಡಿಸತಕ್ಕದ್ದು.	246	69
ತಕ್ಕೀರುಮಾಡಲ್ಪಟ್ಟ ಮೇಲೆ 3 ತಿಂಗಳೊಳಗೆ ಫಿರ್ಯಾದನ್ನು ಮಾಡದ ಪಕ್ಷದಲ್ಲಿ ಯಾವ ಮನುಷ್ಯನಾದರೂ ಜುರ್ಮಾನೆಗೆ ಆಗಲಿ ಅಪರಾಧಕ್ಕೆ ಆಗಲಿ ಪಾತ್ರನಾಗ ಕೂಡದು.	247	99
ಕಮ್ಮಿಷನರಗಳ ಸ್ವತ್ತಿಗೆ (ವೆಂಟುಮಾಡಿದ) ನಷ್ಟವನ್ನು ಜುರ್ಮಾನೆಯ ಕೂಡ ಭರ್ತಿ ಮಾಡಲ್ಪಡತಕ್ಕದ್ದು.	248	69
ಪೊಲೀಸ್ ಆಫಿಸರರು ತಪ್ಪುತಗಳನ್ನು ಕುರಿತು ಕಮ್ಮಿಷನರ್‌ಗಳಿಗೆ ರಿಪೋರ್ಟು ಮಾಡಿ ಕಾಣದ ತಪ್ಪುತನ್ಥರನ್ನು ಹಿಡಿದು ಕೊಡತಕ್ಕದ್ದು.	249	69
ಚಿಕ್ಕ ಹೆಸರು.	250	69

ಷೆಡ್ಯೂಲ್‌ಗಳು.

ತೆರಿಗೆ ಅರ್ಹವಾದ ವಾಹನಗಳನ್ನೂ ಜಂತುವುಗಳನ್ನೂ ತೆರಿಗೆಬಾಬತು ದರಗಳನ್ನೂ. ..	A	70
ಮ್ಯುನಿಸಿಪಲ್ ಸರಹದ್ದಿನ ಒಳಗೆ ಪ್ರವೇಶಿಸುವ ಕಾಲದಲ್ಲಿ ಸಲ್ಲಿಸಲ್ಪಡಬೇಕಾದ ತೆರಿಗೆಗಳು	B	70
ವೃತ್ತಿಗಳು ವ್ಯಾಪಾರಗಳು ಜೀವನೋಪಾಯಗಳು ಯಿವುಗಳ ಮೇಲಿನ ಲೈಸೆನ್ಸು ತೆರಿಗೆ.	C	71
ಸುರಾಯಿಯನ್ನು ಕುರಿತ ಲೈಸೆನ್ಸು ಚೀಟು.	C2	73
ತಗಾದ ನೋಟೀಸು.	D	74
ಜಪ್ತಿ ವಾರೆಂಟು.	E	74
ಸಾಮಾ ಪಟ್ಟಿಯ ಮತ್ತು ನೋಟಿಸಿನ ನಮೂನೆ.	F	75
ಈ ಕಾನೂನನ್ನೆ ಅನುಸರಿಸಿ ಮಾಡಲ್ಪಡುವ ಜಪ್ತಿಗಳ ಮೇಲೆ ಸಲ್ಲಿಸತಕ್ಕ ರುಸುಮುಗಳ ತಕ್ತೆ.	G	75
ಸಾಲಪತ್ರದ ನಮೂನೆ.	H	76
ಜನನವನ್ನು ಕುರಿತ ರಿಪೋರ್ಟು.	K	76
ಮರಣವನ್ನು ಕುರಿತ ರಿಪೋರ್ಟು.	L	76

Mysore Government Central Press, Bangalore.—1889.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ ತಾ|| 19, ಸ|| 1889.

ಪ್ರತ್ಯೇಕ ಈ ಭಾಗವನ್ನು ಪ್ರತ್ಯೇಕ ಕೀರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದ್ದೂರವರ ಆಜ್ಞಾನುಸಾರ ಪೆದ್ದ ತಿಯನ್ನೆನುಸರಿಸಿ, ಈ ದಿವಸ ಗತ ಸಾಲಿನ ಜಮಾಬಂದಿ ತಪಶೀಲನ್ನು ನಿಮಗಳಿಗೆ ತಿಳಿಸುವದರೊಡನೆ, ರಾಜ್ಯದ ನಗದೀಯಾತ್ಮಿನ ಪ್ರಕೃತ ಸ್ಥಿತಿಯನ್ನು ಕಳೆದ ಸಂವತ್ಸರದ ಆಡಳಿತಕ್ಕೆ ಸಂಬಂಧಿಸಿದ ಮುಖ್ಯವಾದ ಕೆಲವು ಅಂಶಗಳನ್ನು ಸಹ ಸಂಕ್ಷೇಪವಾಗಿ ವಿವರಿಸುವದು ನಮಿಗೆ ಸಂತೋಷಕರವಾದ ಕರ್ತವ್ಯವಾಗಿವೆ. ರೈಲ್ವೆ ವಿನಹ ಏಲ್ಲ ಬಾಬುಗಳ ಜಮಾಖರ್ಚು ಇದರಡಿನವೊದಿಸಿರುತ್ತೆ.

ಜಮಾ ಬಾಬು.

	1887—88. ರೂ.	1888—89. ರೂ.
ಲ್ಯಾಂಡ್ ರವಿನ್ಯೂಯಾನೇ ಜಮೀನಿನ ಟಾಬು	85,13,879	83,96,337
ಆಬ್ಕಾರಿ	14,94,522	15,99,615
ಫಾರೆಸ್ಟ	10,08,417	11,35,393
ಸ್ಟ್ಯಾಂಪು	5,05,550	5,55,746
ಸಾಯರ್	4,12,462	4,07,568
ಮೊಹತರ್ಫಾ	3,40,181	3,39,559
ಲಾ ಅಂಡ್ ಜಸ್ಟಿಸಿಯಾನೇ ಜುಡಿಷಿಯಲ್ ಮತ್ತು ಜೈಲುಗಳು	70,038	64,698
ಆಂಡೆ	74,300	76,206
ರಜಿಸ್ಟ್ರೇರ್	53,823	59,605
ಅಮೃತಮಹಲ್	61,582	49,803
ವಿದ್ಯಾಭ್ಯಾಸದ ಇಲಾಖೆ	23,911	26,159
ಉಪ್ಪಿನ ಮೋಳೆ	20,723	27,391
ಪಬ್ಲಿಕ್ ವರ್ಕಸ್ ಯಾನೇ ಮರಹನ್ಮತ್	13,671	20,150
ಭಂಗಾರದ ಗಣಿಗಳು	33,433	1,08,526
ಮೆಡಿಕಲ್‌ಯಾನೇ ವೈದ್ಯಶಾಲೆಗಳ ಬಗೆ	12,190	3,522
ಸೈಂಟಿಫಿಕ್ ಮತ್ತು ಇತರ ಚಿಲ್ಲರೆ ಇಲಾಖೆಗಳ ಬಗೆ	5,885	6,842
ಪರ್ಮಾ ಕಂದಾಯದ ಬಾಕಿಯ ಮೇರಿನ ಬಡ್ಡಿ	33,358	29,003

983

	1887—88. ರೂ	1888—89 ರೂ.
ಗವರ್ಣಮೆಂಟ್ ಪ್ರೊನೋಟ್‌ಗಳನ್ನು ಖರೀದಿಗೆ ತೆಗದದ್ದರಲ್ಲಿ ಬಂಪ ಲಾಭ ನಷ್ಟ ..	61,666	5,498
ಗವರ್ಣಮೆಂಟ್ ಪ್ರೊಸೋಟ್‌ಗಳ ಮೂಲಕ ಇಡಲ್ಪಟ್ಟ ನೊಬಲಗಿನ ಬಡ್ಡಿ ..	1,08,470	1,81,499
ಮದರಾಸ್ ಬ್ಯಾಂಕಿನ ಖಾಲತಿ ಡಿಪಾಜಿಟ್ ಮೊಬಲಗಿನ ಬಡ್ಡಿ ..	37,711	51,153
ಚಿಲ್ಲರೆ ಬಾಬುಗಳು	90,504	85,815
ಜಮ್ಮಾ ..	1,29,76,276	1,32,20,088

ಖರ್ಚು ಬಾಬು.

A

ಸಬ್‌ಸಿಡಿ ಯಾನೇ ಪಗಡಿ	24,50,000	24,50,000
ಸಿವಿಲ್‌ಲೀಸ್ಟ್‌ಯಾನೇ ಅರಮನೇ ಇಲಾಖೆ ಖರ್ಚು	13,00,000	13,00,000
ಸರಕಾರಿ ಸಾಲದ ಬಡ್ಡಿ	4,93,850	4,97,986
ಪೊಲಿಟಿಕಲ್ ವೇತನಗಳು ಮತ್ತು ಜಪಗೀರಿಗೆ ಬದಲಾಗಿ ಕೊಡುವ ಆಲೋವೆನ್ಸಗಳು	1,04,020	1,01,622
ಮಿಲಿಟೇರಿ	7,17,875	7,28,658
ಜಮ್ಮಾ ..	50,65,745	50,78,266

B

ಹುಜೂರು ಇಲಾಖೆ ಖರ್ಚು	2,05,469	2,04,873
ವಸೂಲಾತಿ ಖರ್ಚು.—		
ಡೆಪ್ಯುಟಿ ಕಮ್ಮಿಷನರಗಳು ಮತ್ತು ಅವರ ಸಿಬ್ಬಂದಿ ..	1,68,699	1,68,366
ಅಸಿಸ್ಟೆಂಟ್ ಕಮ್ಮಿಷನರಗಳು ಮತ್ತು ಅವರ ಸಿಬ್ಬಂದಿ ..	57,341	61,182
ತಾಲ್ಲೂಕು ಜಾತಗಳ ಸಿಬ್ಬಂದಿ	3,21,903	3,20,826
ರೆವಿನ್ಯೂ ಸರ್ವೆ ಇಲಾಖೆ	1,94,069	1,73,538
ಇನಾಂ ಇಲಾಖೆ	7,808	7,761
ಗ್ರಾಮ ನೌಕರರ ವೇತನ .. .	4,46,113	4,20,964
ಇತರ ಬಾಬುಗಳು	38,449	26,205
ಆಬ್ಕಾರಿ	28,591	26,865
ಫಾರೆಸ್ಟ್	3,97,529	4,56,778
ಸ್ಟ್ಯಾಂಪು	17,867	21,545
ಸಾಯರ್	13,837	14,096
ಸಾದಿಲವಾರ್ ಮತ್ತು ಛಾಪಾಖಾನೆ	65,172	73,702
ಅಮೃತಮಹಲ್	29,904	31,762
ಸ್ಟೇಟಿಫಿಕ್ ಮತ್ತು ಇತರ ಚಿಲ್ಲರೆ ಇಲಾಖೆಗಳು ..	45,820	51,603
ಜಮ್ಮಾ ..	20,38,571	20,60,066

C

ಲಾ ಅಂಡ್ ಜಸ್ಟೀಸ್‌ಯಾನೇ ಜುಡಿಷಿಯಲ್ ಮತ್ತು ಜೈಲುಗಳು ..	7,44,379	7,49,895
ಪೊಲೀಸ್	5,80,401	5,96,034
ವಿದ್ಯಾಭ್ಯಾಸದ ಇಲಾಖೆ	1,78,172	1,80,920
ಮುಜರಾಯಿ	2,78,932	2,81,964
ಮೆಡಿಕಲ್ ಯಾನೇ ವೈದ್ಯಕಾಲೆಗಳ ಇಲಾಖೆ	1,64,221	1,89,685
ವೇತನಗಳು ಮತ್ತು ಗ್ರಾಟ್ಯೂಟಿಗಳು	2,51,789	2,40,957
ಪಬ್ಲಿಕ್ ವರ್ಕಸ್ ಯಾನೇ ಮರಹಮ್ಮತ್	15,79,906	19,82,076

984

	1887—88 ರೂ.	1888—89 ರೂ.
ಆಂಚೆ	1,35,676	1,36,920
ರಜಿಸ್ಟ್ರೇಷನ್	25,842	28,967
ಬ್ರಿಟಿಷ್ ಆಫಿಸರರ ಫಲೋ ಅಲೋವೆನ್ಸ್, ಗ್ರಾಟ್ಯುಟಿ, ಕಂಪೆನ್ಸೇಷನ್, ಲೀವು ಮತ್ತು ಪೆನ್ಷನ್ ಸಂಬಂಧವಾದ ಖರ್ಚುಗಳು	36,310	30,668
ಮೈಸೂರು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ ಹಣಗಳ ಬಡ್ಡಿ	51,429	52,919
ರೀಫಂಡ್ ಯೂನೇ ವಾಪಸ್ ಖರ್ಚು	47,284	46,029
ಜೇರೆಗಳ ಖೋರಿ ಮತ್ತು ರಿಪೇರಿ	33,603	3,579
ಧನವನ್ನು ಹೊಂದಿದ ಮೈಸೂರಾಯಿ ಗವರ್ನರ್ 5 ಜನರಲ್ ಸಾಹೇಬರವರ ಆಗಮನಾರ್ಥವಾದ ಖರ್ಚು	10,461	..
ಕ್ರೀಮ್ಸ್ ಮಹಾರಾಜರವರ ಉತ್ತರ ಹಿಂದೂಸ್ಥಾನ ಸಂಚಾರ ಸಂಬಂಧವಾದಖರ್ಚಿನ ನೈಕಿ ಅರ್ಧ	63,012	11,813
ಲಂಡನ್ ಪಟ್ಟಣದಲ್ಲಿ ತಯಾರಾಗುವ ಇಂಡೊ ಕಲೋನಿಯಲ್ ಇನ್‌ಸ್ಟಿಟ್ಯೂಟಿಗೆ ಕೊಟ್ಟ ಸಹಾಯ ದ್ರವ್ಯ		50,000
ಚಿಲ್ಲರೆ ಬಾಬುಗಳು	62,858	69,985
ಜಮ್ಮಾ	42,94,275	46,02,391
ಒಟ್ಟು ಜಮ್ಮಾ	1,13,98,591	1,17,40,723

ಜನರಾ.—ಮೇಲಿನ ತಪಶೀಲಿನಿಂದ ಒಟ್ಟಾಮಳಿ ಈ ಸಂವತ್ಸರದ ಜಮೆಯು ಹೋದ ಸಂವತ್ಸರಕ್ಕಿಂತ 2½ ಲಕ್ಷ ಜಾಸ್ತಿಯಾಗಿದೆ ಈ ಅಧಿಕ್ಯವು ಮುಖ್ಯವಾಗಿ ಅಬ್ಕಾರಿ, ಫಾರೆಸ್ಟ್, ಟ್ಯಾಂಪು, ಭಂಗಾರದ ಗಣಿಗಳ ಮೇಲಿನ ರಾಜಾಯ ಮತ್ತು ಪ್ರೊನೋಟು ಬ್ಯಾಂಕು ಡಿಪಾಜಿಟ್ ಇವುಗಳ ಮೇಲಿನ ಬಡ್ಡಿ ಈ ಬಾಬುಗಳಲ್ಲಿ ಆಗಿದೆ.

ಅಬ್ಕಾರಿ ಹುಟ್ಟುವಳಿಯಲ್ಲಿ ಬಂದು ಲಕ್ಷಕ್ಕಿಂತ ಸ್ವಲ್ಪ ಜಾಸ್ತಿಯಿದೆ. ಈ ಖೈಕಿ ಷರಾಬಿನಿಂದ 57,370 ರೂಪಾಯಿ ಉತ್ಪತ್ತಿಯಾಗಿರುತ್ತೆ. ಕಳೆದ ಎರಡು ವರುಷಗಳಲ್ಲಿಯೂ ಷರಾಬು ಮೇಲಿನ ಹಾಸಲು ಒಂದೇ ರೀತಿಯಾಗಿ ಇತ್ತು. ಮತ್ತು ಷರಾಬನ್ನು ಉಪಯೋಗಿಸತಕ್ಕಂಥಾವನು ಅಂಡರ್ ಪ್ರೂಫ್ 20 ಡಿಗ್ರೀ ಬಾಬತಿನ ಗ್ಯಾಲ್ 1ಕ್ಕೆ 5 ರೂಪಾಯಿನಷ್ಟು ಜಾಸ್ತಿಯಾಗಿ ಕಿಮ್ಮತ್ತು ಕೊಡಬೇಕಾಗಿತ್ತು. ಆದಾಗ್ಯೂ, ಸರಕಿನ ಖರ್ಚು ಹೆಚ್ಚಿದೆ ಯಿದೆ. 1885—86ನೇ ಇಸವಿ ಲಾಗಾಯತು ಪ್ರತಿ ವರ್ಷದಲ್ಲಿಯೂ ಹಾಸಲ್ ವಸೂಲಾಗಿರುವ ಗ್ಯಾಲ್‌ಗಳನ್ನ ಮೊಕಾಬಿಲೆ ನೋಡಿದರೆ, ವಿಶೇಷವಾಗಿ ಮಜೂರಿದಾರ್ರು ಹೊರಗಿನಿಂದ ಜಮಾಯಿಸಿದ್ದರಿಂದಲೂ ಮಜೂರಿದರ ಹೆಚ್ಚಿದ್ದರಿಂದಲೂ ಸಹ ಈ ಅಧಿಕ್ಯಕ್ಕೆ ಕಾರಣವಾಯಿತೆಂದು ಹೋದವರುಷ ನಾವ್ಮಟ್ಟ ಅಭಿಪ್ರಾಯವು ದೃಢಪಡುತ್ತೆ. ರೈಲ್ವೆ ಕಾಮಗಾರಿ ಬಹಳವಾಗಿ ನಡಿಯುತ್ತಿದ್ದ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಸರಕಿನ ಖರ್ಚು ಅತ್ಯಧಿಕವಾಗಿದೆ. ಕೋಲಾರದಲ್ಲಿಯೂ ಸಹ ಭಾರೀ ಮರಹಮ್ಮತ್ತ ಕಾಮಗಾರಿಗಳು ನಡಿಯುವದ್ದರಿಂದಲೂ ಭಂಗಾರ ಗಣಿ ಕೆಲಸಗಳು ನಡಿಯುವದ್ದರಿಂದಲೂ ಸಹ ವಿಶೇಷವಾಗಿ ಜಾಸ್ತಿಯಾಗಿದೆ. ತುಮಕೂರಿನಲ್ಲಿ ರೈಲ್ವೆ ಕಾಮಗಾರಿಗಳು ನಡಿಯೋಣವೇ ಜಾಸ್ತಿಗೆ ಮುಖ್ಯಕಾರಣ. ಮೈಸೂರಿನಲ್ಲಿ ಮರಹಮ್ಮತ್ತ ಕಾಮಗಾರಿಗಳು ನಡಿಯುವದೇ ಜಾಸ್ತಿಗೆ ಮುಖ್ಯಕಾರಣ. ಹಾಸನ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಅಕ್ರಮವಾಗಿ ಇಟ್ಟಿಯಿದ್ದ ಭಟ್ಟಿಗಳನ್ನ ನಿಲ್ಲಿಸಿದ್ದರಿಂದಲೂ ಮುಖ್ಯವಾಗಿ ಕಾಫೀ ಕೂಲಿಗಳಿಗೋಸ್ಕರವಾಗಿಯೂ ಹೆಚ್ಚು ಖರ್ಚಾಗಿರುತ್ತೆ. ಬೆಂಗಳೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ, ಜಾಸ್ತಿ ಏನೂ ವಿಶೇಷವಾಗಿಲ್ಲ.

ಅಕ್ರಮವಾದ ಭಟ್ಟಿಗಳನ್ನ ನಿಲ್ಲಿಸಿದ್ದರಿಂದ ಷರಾಬಿನ ಬಿಕರಿಯಲ್ಲಿ ಉಂಟಾಗಿರುವ ಜಾಸ್ತಿಯು ಮೂಲೆ ತಾಕಾಗಿ ರಸ್ತೇ ವಗೈರೆ ಇಲ್ಲದೆ ಇರತಕ್ಕ ಸ್ಥಳಗಳಲ್ಲಿ ಮಾತ್ರ ಕಂಡು ಬಂದಿರುತ್ತೆ. ಇದಕ್ಕಿಂತ ಹೆಚ್ಚು ದರ ಮಜೂರಿ ಸಿಕ್ಕತಕ್ಕ ರೈಲ್ವೆ ಭಂಗಾರದ ಗಣಿ ಮತ್ತು ಭಾರೀ ಮರಹಮ್ಮತ್ತ ಕಾಮಗಾರಿನಡಿಯುವ ಸ್ಥಳಗಳ ಸಮೀಪದಲ್ಲಿ ವಿಶೇಷ ಜಾಸ್ತಿ ಕಾಣುತ್ತೆ, ಆದರೆ ದೇಶದಲ್ಲೆಲ್ಲಾ ಸಾಮಾನ್ಯವಾಗಿ ಬಿಕರಿ ಜಾಸ್ತಿಯಾಗಿರುವದಕ್ಕೆ ಈಚೆಗೆ ಉಂಟಾದ ಮಳೆಬೆಳೆಗಳ ಸಮೃದ್ಧಿಯೇಕಾರಣವೆಂದು ತಿಳಿಯಬೇಕಾಗಿದೆ. ಆದ್ದರಿಂದ ಷರಾಬು ಜಾಸ್ತಿ ಖರ್ಚಾದ್ದಕ್ಕೆ ಕಾಲಸ್ಥಿತಿಯು ಅನುಕೂಲ್ಯತೆಯೂ ಧಾನ್ಯಗಳ ಆರ್ಥೆತೆಯೂ ಮಜೂರಿಯ ಜಾಸ್ತಿ ರಿವಾಜು ಸಹ ಸೇರಿ ಕಾರಣವಾಯಿತೆಂದು ನಾವು ನಿರಾಕ್ಷೇಪವಾಗಿ ನಿರ್ಧರಿಸಬಹುದು. ಈ ವರ್ಷದಲ್ಲಿ ಇಂಪೀರಿಯಲ್ ಗ್ಯಾಲನಿನ $\frac{1}{48}$ ರಲ್ಲಿ ಬಂದು ಭಾಗದಿಂದ $\frac{1}{31}$ ರಲ್ಲಿ ಬಂದು ಭಾಗಕ್ಕೆ ಡ್ರಾಮಿನ ಪ್ರಮಾಣವನ್ನು ತಗ್ಗಿಸುವದರ ಮೂಲಕ ಅಂಡರ್ ಪ್ರೂಫ್ 20 ಡಿಗ್ರೀ ಬಾಬತಿನ ಷರಾಬಿನ ಬಿಕರಿ ದರ ಗ್ಯಾಲ್ 1ಕ್ಕೆ 5 ರೂಪಾಯಿಯಿಂದ 5 ರೂ. 5 ಆಣೆಗೆ ಪುನಃ ಹೆಚ್ಚಿಸಿ

ಇರುತ್ತೆ. ಹೀಗೆ ಅಳತೆ ಸಾಧನವನ್ನ ಕಮ್ಮಿ ಮಾಡಿರುವದ್ದರಿಂದ ಪ್ರತಿ ಬಬ್ಬನು ಬಂದಾಪರ್ತಿ ತೆಗೆಯುವ ಷರಾಪ್ ಪ್ರಮಾಣ ಕಮ್ಮಿ ಮಾಡಿದಂತೆಯೂ ಆಯಿತು.

ಹೋದ ವರಷವು ಹಾಲಿ ಕೇಂದಿ ಕಂಟ್ರಾಕ್ಟಿನ ಎರಡನೇ ವರ್ಷವಾಗಿತ್ತು. ಈ ಕಂಟ್ರಾಕ್ಟಿನ ಮೊಬಲಗು ಸುಲಿಯಾನಾ 7,32,000 ರೂಪಾಯಿ ಆಗಿರುತ್ತೆ. ಆದರೆ ಪ್ರತಿಸಾಲಿನಲ್ಲಿಯೂ ವಸೂಲಾಗಿರತಕ್ಕ ಮೊಬಲಗುಗಳಲ್ಲಿ ಕಾಣಬರುವ ಅಲ್ಪವಾದ ಕಮ್ಮಿ ಜಾಸ್ತಿಯು ಬಿಸ್ತುಗಳು ಮಾರ್ಚಿ 31ರ ಒಳಗಾಗಿ ವಸೂಲಾಗದೆ ಇದ್ದ ಕಾರಣದಿಂದ ಉಂಟಾಗಿದೆ.

ಫಾರೆಸ್ಟ್ ಬಾಬಿನಲ್ಲಿ ಶ್ರೀಗಂಧದ ಧಾರಣೆಯು ಬೊಂಬಾಯಿಯಲ್ಲಿ ಇಳಿದು ಹೋಗಿದ್ದದ್ದರಿಂದ 1887—88ನೇ ಸಾಲಿಗಿಂತ ¼ ಲಕ್ಷ ಕಮ್ಮಿಯಾಗಿ 6 ಲಕ್ಷ ಮಾತ್ರವೇ ಉತ್ಪತ್ತಿಯಾಗಿರುತ್ತೆ. ಆದರೆ, ಸಾಗುವಾನಿ, ಮತ್ತು ಚಿಲ್ಲರೆ ಬಾಬುಗಳಿಂದ 5 ಲಕ್ಷ ರೂಪಾಯಿಗಳು ಪುಟ್ಟುವಳಿ ಆಗಿ ಇದೆ. ಈ ಬಾಬಿನಲ್ಲಿ 1887—88ನೇ ಸಾಲಿನಲ್ಲಿ 3 ಲಕ್ಷ ಮಾತ್ರವೇ ಉತ್ಪತ್ತಿಯಾಯಿತು. ಆದ್ದರಿಂದ ಒಟ್ಟಾ ಮುಳೆ 1¼ ಲಕ್ಷ ಜಾಸ್ತಿಯಾಗಿದೆ.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಗನಿಗಳಿಂದ ಭಂಗಾರ ತೆಗಿಯುವ ಕೆಲಸ ವಿಶೇಷವಾಗಿ ಅಭಿವೃದ್ಧಿಸ್ಥಿತಿಯಲ್ಲಿದೆ ಗನಿಕೆಲಸ ನಡೆಸುವ ವಿಸಿಪ್ಟ ಕಂಪೆನಿಗಳಿಂದಲ್ಲೂ 1888ನೇ ಇಸವಿಯಲ್ಲಿ ತೆಗಿಯಲ್ಪಟ್ಟ ಈ ಆನರ್ಘ್ಯವಾದ ಲೋಹವು 35,073 ಔನ್ಸಿತೂಗಿತು; 1887ನೇ ಇಸವಿಯಲ್ಲಿ 15,403 ಔನ್ಸಿ ಮಾತ್ರವೇ ತೆಗಿಯಲ್ಪಟ್ಟಿತು. ಮೈಸೂರು ಕಂಪೆನಿಯವರು ಮಾತ್ರವೇ ಈ ಎರಡು ವರುಷಗಳಲ್ಲಿಯೂ 19,090 ಮತ್ತು 1 3,087ಔನ್ಸಿ ಭಂಗಾರವನ್ನ ತೆಗದರು. ಕಳೆದ ಸಂವತ್ಸರ ವಸೂಲಾದ ರಾಜಾಯವು 1 ಲಕ್ಷಕ್ಕಿಂತ ಜಾಸ್ತಿಯಾಯಿತು.

ಸಿಲ್ಕು ಮೊಬಲಗಿನಿಂದ ಸರ್ಕಾರಕ್ಕೆ ತೆಗದ ಗವರ್ನ್ ಮೆಂಟ್ ಪ್ರೋನೋಟ್ ಬಾಬತು ಬಡ್ಡಿ ಮತ್ತು ಮದರಾಸ್ ಬ್ಯಾಂಕ್ ಕರೆಂಟ್ ಡಿಪಾಜಿಟ್ ಬಡ್ಡಿ ದೇಬಿಟ್ ಈ ಬಾಬಿನಲ್ಲಿ 86,000 ರೂಪಾಯಿಗಳು ಜಾಸ್ತಿಗೆ ಕಾರಣವಾಗಿದೆ.

ಈ ಸಾಲಿನಲ್ಲಿ ಆದ ಪುಟ್ಟುವಳಿ ಕಮ್ಮಿಯು, ಮುಖ್ಯವಾಗಿ ಲ್ಯಾಂಡ್ ರೆವಿನ್ಯೂ ಯಾನೇ ಜಮೀರ್ಾ ಬಾಬಿನಲ್ಲಿ ಉಂಟಾಗಿರುತ್ತೆ. ಶಿಲಶಿಲಾ ಬಾಕಿಯು ಸಾಲಬಸಾಲ್ ತಗ್ಗುತ್ತಾ ಬಂದದ್ದರಿಂದ ಈ ಕಮ್ಮಿಗೆ ಕಾರಣವಾಯಿತು. ಕಳೆದ ಮೂರು ಸಾಲ್‌ಗಳ ಆರಂಭದಲ್ಲಿ ಶಿಲಶಿಲಾ ಬಾಕಿಯು 25,04,777 ರೂ. 18,05,879ರೂ. 13,99,079 ರೂ. ಈ ರೀತಿ ಇತ್ತು; ಈ ಸಾಲಿನ ಷುರುವಿನಲ್ಲಿ ಸದರೀ ಬಾಕಿಯು 12,98,279 ರೂಪಾಯಿಗೆ ಇಳಿಯಿತು.

1887—88 ನೇ ಇಸವಿಗಿಂತಲೂ ಈ ಸಾಲಿನಲ್ಲಿ ಶಿಲಶಿಲಾ ಬಾಕಿಪೈಕಿ ಕಮ್ಮಿ ವಸೂಲಾದದ್ದು .. 3,47,464

ಸಾಲ್‌ಗುದಸ್ತೆಯಲ್ಲಿ ಗುದಸ್ತೆ ಬಾಬತು ವಸೂಲಾದ್ದಕಿಂತಲೂ ಸಾಲ್‌ಮಜಕೂರು ಜಮಾಬಂದಿ ಪೈಕಿ ಸಾಲೀಪಾಲನಲ್ಲಿ ವಸೂಲಿಜಾಸ್ತಿ 2,29,904

ನಿವ್ವಳಕಮ್ಮಿ....1,17,542

ಜನರ್ಲ್ ಬಾಬಿನ ಪುಟ್ಟುವಳಿಯ ಪ್ರಕೃತಸ್ಥಿತಿಯು ಸಾಲ್‌ಜಮಾಬಂದಿಯಿಂದ ತಿಳಿಯಬರುವಹಾಗೆ ಜ್ಞ ವಸೂಲಾತಿಯಿಂದ ಕರಾರ್‌ವಾಕಾ ತಿಳಿಯುವದಿಲ್ಲ. 1888—89 ಇಸವಿ ಬಾಬತು ರೂ. 82,84,998 ಜಮಾಬಂದಿಯು ಎಂದಿಗಿಂತಲೂ ಅಧಿಕವಾಗಿರುತ್ತೆಂದು ಹೇಳುವದಕ್ಕೆ ನಾವು ಸಂತೋಷಿಸುತ್ತೇವೆ. ಈ ಶ್ರೀಮಂತ ಶ್ರೀಮನ್ಮಹಾರಾಜರವರ ಸುಪರ್ದಾಗುವದಕ್ಕೆ ಪೂರ್ವ ಚಜಸಾಲ್ ಆಗಿದ್ದ 1867—68ನೇ ಇಸವಿಯಲ್ಲಿ ಲ್ಯಾಂಡ್ ರೆವಿನ್ಯೂ ಜಮಾಬಂದಿಯು 76ಲಕ್ಷ ರೂ. ಆಗಿತ್ತು. 1875—76ನೇ ಇಸವಿಯಲ್ಲಿ ಅದು 78½ ಲಕ್ಷಕ್ಕೆ ತಗ್ಗಿ ಇದಕ್ಕೆ ಮುಂದಿನ ಸಾಲಿನಲ್ಲಿ ಕ್ಷಾಮದದೆಸೆಯಿಂದ 64½ಲಕ್ಷಕ್ಕೆ ಇಳಿಯಿತು. ಮತ್ತು ಸಂಸ್ಥಾನ ಸುಪರ್ದು ಆಗುವದಕ್ಕೆ ಹಿಂದಣ ಸಂವತ್ಸರವಾದ 1880—81ನೇ ಸಾಲಿನಲ್ಲಿ ಅದು ಸುಮಾರು 69½ ಲಕ್ಷವಾಗಿತ್ತು. ಇದರ ಮುಂದಣ 4 ಸಂವತ್ಸರಗಳಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಾಗುತ್ತಾ ಬಂದು ಕಳೆದ ಕಡೇ 4 ಸಾಲ್‌ಗಳಲ್ಲಿ ವಿಶೇಷವಾಗಿ ಅಭಿವೃದ್ಧಿಯಾಯಿತು. ಇದು ಇದರಡಿ ಇರುವ 1884—85 ನೇ ಇಸವಿ ಮತ್ತು ಈಚಿನ ಸಾಲ್‌ಗಳ ಮೊಬಲಗುಗಳಿಂದ ವ್ಯಕ್ತಪಡುತ್ತೆ.

	ರೂಪಾಯಿಗಳು.
1884—85	74,05,000
1885—86	7786,000
1886—87	81,31000
1887—88	81,41,000
1888—89	82,85,000

ಸೆರ್ವೆ ಸೆಟಿಲ್‌ಮೆಂಟಿನಿಂದ ಉಂಟಾಗಿರುವ ಜಾಸ್ತಿಯು ಅಷ್ಟು ವಿಶೇಷವಾಗಿರುವದಿಲ್ಲ. ಆದರೂ ವರ್ಷೇ ವರ್ಷ ಸಾಗುವಳಿಯು ಜಾಸ್ತಿಯಾಗುತ್ತಾ ಬಂದಿರುವದು ಕಳೆದ 4 ವರ್ಷಗಳಲ್ಲಿನ ಹಿಡುವಳಿ ವಿಸ್ತೀರ್ಣಗಳನ್ನು ವೊಕಾಬಿಲೆ ಮಾಡುವದ್ದರಿಂದ ಕಾಣಬರುತ್ತೆ. ಒಟ್ಟು ಹಿಡುವಳಿ ಜಮೀನ್ ಬೀಜವರಿಯು ಕಳೆದ ನಾಲ್ಕು ಸಾಲುಗಳಲ್ಲಿ ಈ ಕೆಳಗೆ ನಮೂದಿಸಿದಂತೆ ಇತ್ತು.—

	ಎಕರೆಗಳು.
1885—86	48,25,000
1886—87	51,00,000
1887—88	52,45,000
1888—89	53,48,000

ಕಳೆದ ಮೂರುವರುಷಗಳಿಂದಲೂ ಕಾಲಸ್ಥಿತಿಯು ವಿಶೇಷ ಅನುಕೂಲವಾಗಿದ್ದದ್ದರಿಂದ ವ್ಯವಸಾಯವು ಅವಿಚ್ಛಿನ್ನವಾಗಿ ವೃದ್ಧಿಯಾಯಿತೆಂದು ಮೇಲಣ ತಪ್ಸೀಲಿನಿಂದ ವ್ಯಕ್ತಪಡುತ್ತೆ. ಚಾಲ್ತೀ ವರುಷದ ವ್ಯವಸಾಯ ಪ್ರತೀಕ್ಷೆಯು ಉತ್ಕೃಷ್ಟವಾಗಿದೆಯೆಂದು ದೇವರೇ ಸಂತೋಷಿಸತಕ್ಕದ್ದಾಗಿದೆ.

ಖರ್ಚು.—ಈ ಸಾಲಿನ ಖರ್ಚು ಗತಸಾಲಿಗಿಂತಲೂ 3,42,000 ರೂಪಾಯಿ ಜಾಸ್ತಿಯಿಂದ 1,17,40,000 ರೂಪಾಯಿ ಆಗಿರುತ್ತೆ.

ಅನೇಕವಾದ ಭೂರಿ ಮರಹಮ್ಮತ್ ಕಾಮಕಾರಿಗಳು ಮಂಜೂರಾಗಿರುವದ್ದರಿಂದ 4,02,000 ರೂಪಾಯಿ ಜಾಸ್ತಿಯು ಮುಖ್ಯವಾಗಿ ಪಬ್ಲಿಕ್‌ವರ್ಕ್ಸ್‌ಯಾನೆ ಮರಹಮ್ಮತ್ ಬಾಬಿನಲ್ಲಿ ಆಗಿರುತ್ತೆ. ಇದು ಮುಂದೆ ವಿವರಿಸಲ್ಪಡುತ್ತೆ.

ಫಾರಿಷ್ಟು ಬಾಬಿನಲ್ಲಿ 59,000 ರೂಪಾಯಿ ಜಾಸ್ತಿ ಖರ್ಚಾಗಿರುತ್ತೆ, ಈ ಪೈಕಿ 44,000 ರೂಪಾಯಿ ಅನೇಕಂಗಡಿ ಪಿಕಾರಿ ಉದ್ದಿಶ್ಯವಾಗಿಯೂ ಬಾಕಿ 15,000 ರೂಪಾಯಿ ಫಾರೆಷ್ಟು ನಿಗೆವಾಸ್ತಿಗೋಸ್ಕರವಾಗಿಯೂ ಮತ್ತು ಈ ಇಲಾಖೆಯ ಸಿಬ್ಬಂದಿಗೋಸ್ಕರವೂ ಖರ್ಚಾಗಿರುತ್ತೆ. ಪೊಸ ಪ್ಲಾಂಟೇರ್ಷಗಾಗಿ 86,000ರೂಪಾಯಿ ಖರ್ಚಾಗಿದೆ. 1887—88ನೇ ಸಾಲಿನಲ್ಲಿ ಇದಕ್ಕಾಗಿ 68,000 ವ್ಯಯವಾಗಿತ್ತು.

ಮೆಡಿಕಲ್‌ಯಾನೆ ವೈದ್ಯ ಸಂಬಂಧವಾದ ಬಾಬಿನಲ್ಲಿ ಹೊಸದಾಗಿ ಔಷಧಶಾಲಾ ಸ್ಥಾಪನೆಗೋಸ್ಕರವೂ ಅಸಿಸ್ಟೆಂಟ್ ಸರ್ಜ್‌ಗಳ ಸಂಬಳಗಳನ್ನು ಪೆಚ್ಚು ಮಾಡಿದ್ದಕ್ಕೋಸ್ಕರವೂ 25,000 ರೂಪಾಯಿ ಜಾಸ್ತಿ ಖರ್ಚು ಆಯಿತು.

ರೈಲ್ವೆ ಆನಾಯ ಮತ್ತು ಬಡ್ಡಿ —ಸ್ಟೇಟ್ ರೈಲ್ವೆಯಲ್ಲಿ ಖರ್ಚು ಜಾಸ್ತಿ ಆಗಿ ಉಳಿದ ಉತ್ಪತ್ತಿ ಪೈಕಿ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಂದ ಒಂದ ೪ ಅಂತಕ್ಕಾಗಿ 69,629 ರೂ. ಜಾಸ್ತಿ ಬಂದಿರುತ್ತೆ. 1887—88ನೇ ಸಾಲಿನಲ್ಲಿ 2,78,250 ರೂ. ಜಮೆಯಾಯಿತು. ಇಷ್ಟು ವಿಶೇಷವಾದ ಕಮ್ಮಿಯಾಗಿರುವದಕ್ಕೆ ಸ್ಟೇಟ್ ರೈಲ್ವೆಯಲ್ಲಿ ಉತ್ಪತ್ತಿಯಾದ ಪಣವ ಪೈಕಿ ರೈಲ್ವೆ ತಯಾರಾಗಿ ವ್ಯಪಯೋಗದಲ್ಲಿರುವ ಭಾಗದಲ್ಲಿ ಅವಶ್ಯಕವಾದ ಕಾಮಗಾರಿಗಳು ನಡಿಸಿದ್ದು ಕಾರಣವಾಗಿರುತ್ತೆ. ಇಂಗ್ಲಾಂಡಿನಲ್ಲಿ ತೆಗದ ಮೂಲಧನದ ಪೈಕಿ ತಪಲ್ ಖರ್ಚಾಗಿರುವ ವೊಬಲಗಿನ ಭರವಸೆ ಬಡ್ಡಿಗಾಗಿ ಸರಕಾರದಿಂದ 3,65,039 ರೂ. ಕೊಡಬೇಕಾಯಿತು.

ಕಿಲುಕು.—ರೈಲ್ವೆ ಹುಟ್ಟುವಳಯು ಮತ್ತು ಪಾವತಿಯಾದ ಭರವಸೆ ಬಡ್ಡಿ ವೊಬಲಗು ಸೇರಿ ಒಟ್ಟು ಜಮೆ 1,32,89,717 ರೂ. ಪೈಕಿ ಒಟ್ಟು ಖರ್ಚು 1,21,05,762 ರೂ. ಜಾತಾ ಈ ವರ್ಷದ ಆಡಳತದಲ್ಲಿ 11,83,955 ರೂ. ಮಿಗತೆಯಾಯಿತು. ಇದು 1888ನೇ ಏಪ್ರಿಲ್ ಗುರ್ತಿಯಲ್ಲಿದ್ದ ಶಿಲಿಲಾ ಶಿಲ್ಕಿಗೆ ಸೇರಿಸಿದಲ್ಲಿ ಒಟ್ಟು ಸಾಲ್ ಆಖೈರಿನಲ್ಲಿ 77,35,835 ರೂ. ನಿಂತಿತು. ಈ ವೊಬಲಗು ಪೈಕಿ ಸುಮಾರು 50 ಲಕ್ಷ ರೂ. ಗವರ್ನಮೆಂಟ್ ಪ್ರೋನೋಟು ರೂಪವಾಗಿ ಇಡಲ್ಪಟ್ಟಿರುತ್ತೆ. ಸುಮಾರು 10 ಲಕ್ಷ ರೂಪಾಯಿ ಅದೇರೀತಿಯಾಗಿ ಈ ಸಾಲಿನಲ್ಲಿ ಪ್ರೋನೋಟ್ ಮೂಲಕ ಇಡಲ್ಪಡುತ್ತೆ. ಬಾಕಿ ಐವಜ ಈಗ ನಡೆಯುವ ಸಾಲಿನ ಆಡಳತಕ್ಕಾಗಿ ಸಗದಿ ಪಾಜರಿ ಅವಶ್ಯಕವಾಗಿದೆ.

ಬಡಿಜಟ್ ಅಂದಾಜುಗಳು.—ಸ್ಟೇಟ್ ರೈಲ್ವೆಯ ನಿವ್ವಳ ಉತ್ಪತ್ತಿ ವಿನಾಯಿಸಿ, ಈಗ ನಡೆಯುವ ಸಾಲಿನ ಬಡಿಜಟ್ ಅಂದಾಜು 1,27,26000 ರೂಪಾಯಿ. ಈ ಅಂದಾಜು ಪೋದ ಸಾಲಿನಲ್ಲಿ ವಸೂಲಾದ ವೊಬಲಗಿಗಿಂತ 1,94,000 ರೂಪಾಯಿ ಕಮ್ಮಿಯಾಗಿದೆ. ಜಮೀನ್ ಬಾಬಿನಲ್ಲಿ ಈಗ ನಡೆಯುವಂತೆ ಕಾಲಸ್ಥಿತಿಯು ಮುಂದಕ್ಕೂ ಹೆಚ್ಚಿಸಿದರೆ ವಸೂಲಿಯು 84,00,000 ಆಗಬಹುದೆಂದು ನಿರೀಕ್ಷಿಸುವದಕ್ಕೆ ತಕ್ಕ ಕಾರಣವಿದ್ದಾಗ್ಯೂ ಅಂದಾಜಿನಲ್ಲಿ 82,00,000 ಮಾತ್ರವೇ ದಾಖಲ್ಮಾಡಿದ ಲಾಬ್ಕಾರೀ ಫಾರೆಸ್ಟ್ಸ್, ಮತ್ತು ಇರತ ಬಾಬಿನಲ್ಲಿಯೂ ಹಿಂದಿನ ಸಾಲ್‌ಗಳ ಪ್ರಾಮಾಷಾಯಿ ಹಮೇ ಮೇಲೆ ದಾಖಲ್ಮಾಡಿರತಕ್ಕ ಆಂದಾಜಿನಲ್ಲಿ ಸ್ವಲ್ಪವಾಗಿ ಕಮ್ಮಿಕಂಡು ಬರುತ್ತೆ.

ಇಂಗ್ಲಾಂಡಿನಲ್ಲಿ ತೆಗದ ರೈಲ್ವೆ ಸಾಲದ ಬಡ್ಡಿ ವಿನಾಯಿಸಿ ಹಾಲಿ ನೆಡೆಯುವ ಸಾಲಿನ ಖರ್ಚು ತಿದ್ದುಪಾಟು ಬಡಿಜಟ್ ಅಂದಾಜು ಪ್ರಕಾರ 1,21,45,000 ಆಗುತ್ತೆ. ಈ ಅಂದಾಜಿಗೆ ಅಧಾವಾದ 1888—89ನೇ ಇಸವಿಯ ಖರ್ಚು ಮೊಬಲಗು 1,17,40,723 ರೂಪಾಯಿ, ಜಾಸ್ತಿ ಅಂದಾಜು ಮಾಡಿರತಕ್ಕ ಮುಖ್ಯ ಬಾಬುಗಳ್ಯಾವ ವಂದರೆ:—

ರೂಪಾಯಿಗಳು.

1,05,000 ಜಮೀನ್ ಹುಟ್ಟುವಳಿ ಬಾಬಿನಲ್ಲಿ ಮುಖ್ಯವಾಗಿ ಗ್ರಾಮ ನೌಕರರ ವೇತನ ಮತ್ತು ಮೈನಾಡಿನ ಇನಾಂ ಗಳಿಗೋಸ್ಕರ ರವ್ಹೂ ಜಾಸ್ತಿ.

87,000 ಫಾರೆಸ್ಟ್ ಯಾನೇ ಜಂಗ್ಲೀ ಬಾಬಿನಲ್ಲಿ ನಿಗೆವಾನಿ ವಿಸ್ತಾರವನ್ನು ಚನ್ನಾಗಿ ಕ್ರಮಪಡಿಸುವದಕ್ಕೂ ವಿಸ್ತಾರವಾಗಿ ಫಾರೆಸ್ಟ್ ಕೆಲಸಗಳನ್ನು ನಡೆಸಲು ಫಾರೆಸ್ಟ್ ಶಿಬ್ಬಂದಿಯನ್ನು ಬಲಪಡಿಸುವದಕ್ಕೂ ಜಾಸ್ತಿ.

1,12,000 ವಿದ್ಯಾಭ್ಯಾಸದ ಬಾಬಿನಲ್ಲಿ ಜಾಸ್ತಿ. ಈ ಪೈಕಿ ತಾಲ್ಲೂಕು ಕನ್ನಡ ಪಾಠಶಾಲೆಗಳನ್ನು ಲೋಕಲ್ ಫಂಡಿನಿಂದ ಪ್ರೊವಿನ್ಷಿಯಲ್ ಫಂಡಿಗೆ ಪುನಹ ವರ್ಗವಾಡಿದ್ದರಿಂದ 69,000 ರೂಪಾಯಿ ಜಾಸ್ತಿ. ತಾಲ್ಲೂಕು ಕನ್ನಡ ಪಾಠಶಾಲೆಗಳ ಖರ್ಚು 1879—80ನೇ ಇಸವಿಯಲ್ಲಿ ಸಂಭವಿಸಿದ್ದ ರ್ವ್ಯಾನಾನುಕೂಲತೆಗೋಸ್ಕರ ಪ್ರೊವಿನ್ಷಿಯಲ್ ಫಂಡಿನಿಂದ ಲೋಕಲ್ ಫಂಡಿಗೆ ವರ್ಗ ಮಾಡಲ್ಪಟ್ಟಿತ್ತು; ಆದರೆ ಗ್ರಾಮಸ್ಥರಪ್ರಯೋಜನಕ್ಕೋಸ್ಕರ ವಾಗಿ ಸ್ಥಾಪಿಸಲ್ಪಟ್ಟ ಹೋಬಳಿ ಮತ್ತು ಗ್ರಾಮಗಳಲ್ಲಿನ ಪಾಠಶಾಲೆಗಳಲ್ಲಿ ನಡೆಯುವ ಆರಂಭ ವಿದ್ಯಾಭ್ಯಾಸ ಕ್ಕೋಸ್ಕರ ಮಾತ್ರವೇ ಲೋಕಲ್ ಸೆಸ್ ಮೊಬಲಗಿನ ಪೈಕಿ ಸೇಕಡ 24ರ ಮೇರೆ ಪ್ರತ್ಯೇಕಿಸಿರುವ ಈ ಲೋಕಲ್ ಫಂಡನ್ನು ವಿನಿಯೋಗ ಪಡಿಸಬೇಕೆಂಬ ಪ್ರಥಮ ಉದ್ದೇಶದಂತೆಯೇ ನಡಿಸುವದಕ್ಕೋಸ್ಕರ ತಾಲ್ಲೂಕು ಕನ್ನಡ ಸ್ಕೂಲ್ ಖರ್ಚನ್ನು ತಿರಿಗಿ ಪ್ರೊವಿನ್ಷಿಯಲ್ ಫಂಡಿಗೆವರ್ಗ ಮಾಡಲು ಅವಶ್ಯಕ ಕಂಡು ಬಂತು. ಬಾಲಕ ಬಾಲಕಿ ನೂತನ ವಿದ್ಯಾಶಾಲೆಗಳಿಗೆ ಸಹಾಯದ್ರವ್ಯ ಕೊಡತಕ್ಕ ಬಗ್ಯೂ ಚಾಲ್ತಿ ಯಲ್ಲಿರುವ ಸ್ಕೂಲ್ ಕಟ್ಟಡಗಳನ್ನು ವಿಸ್ತಾರಿಸುವದಕ್ಕೂ ಮತ್ತು ಕೆಲವು ವರುಷಗಳಿಂದ ಬೆಂಗಳೂರು ಮುನಿಸಿಪಾಲಿಟಿಯವರು ವಹಿಸುತಿದ್ದ ಕೆಲವು ಬಾಬುಗಳನ್ನು ಪುನಹ ಪ್ರೊವಿನ್ಷಿಯಲ್ ಫಂಡಿಗೆ ವರ್ಗಾಯಿಸಿದ್ದರಿಂದಲೂ 22,000 ರೂಪಾಯಿಗಳು ಜಾಸ್ತಿ.

30,000 ಎಕ್ಸೈಸ್ ಯಾನೇ ಆಬ್ಕಾರಿ ಬಾಬಿನಲ್ಲಿ ಯಕ್ಸೈಸ್ ಕಮ್ಮಿಷನರವರ ವೊಕರೂರಾತಿಗೋಸ್ಕರವೂ ಮತ್ತು ಈ ಬಾಬಿನ ಲವಾಜಮಗೋಸ್ಕರವೂ ಜಾಸ್ತಿ. ಈ ಹೆಚ್ಚು ಖರ್ಚು ವೇಲೆ ವಿವರಿಸಿದಂತೆ. ಡ್ರಾಂ ಪರಮಾಣವನ್ನ ಕಮ್ಮಿ ಮಾಡಿದ್ದರಿಂದ ಉಂಟಾಗುವ ಆದಾಯದಿಂದ ಸಂಪೂರ್ಣವಾಗಿ ಭರ್ತಿಯಾಗುತ್ತೆ.

ರೈಲ್ವೆ ಅಂದಾಜು.—ತಿದ್ದುಪಾಟಾದ ಬಡಿಜಟ್ ಪ್ರಕಾರ ರೈಲ್ವೆ ಉತ್ಪತ್ತಿ ಪೈಕಿ ಸರಕಾರಕ್ಕೆ ಬರಬೇಕಾದ ¼ ಅಂಕವು, ಬಹಳ ಜಾಗರೂಕತೆಯಿಂದ ಅಂದಾಜ್ ಮಾಡಿದ್ದರಲ್ಲಿ 3 ಲಕ್ಷ ರೂಪಾಯಿ ಆಗುತ್ತೆ. ಇಂಗ್ಲಾಂಡಿನಲ್ಲಿ ರೈಲ್ವೆಗಾಗಿ ತೆಗೆದ ಮೂಲಧನವಾದ ಪೌ. 990700—ಷಿ. 10—ಪೆ. 8ಗೆ ದರ ರೂಪಾಯಿ 1ಕ್ಕೆ ಷಿ. 1—ಪೆ. 4 ಪ್ರಕಾರ ಆಗುವ ಮೊಬಲಗಿನ ಬಡ್ಡಿಯು 6,53,100 ರೂಪಾಯಿಯೆಂದು ಅಂದಾಜ್ ಮಾಡಿರುತ್ತೆ. ಈ ರೀತಿ ರೈಲ್ವೆಗಾಗಿ ಈ ಸಾಲಿನಲ್ಲಿ ಕೊಡಬೇಕಾದ ದೇಣಿಯು 3½ ಲಕ್ಷ.

ಮುಂದಣ ನಗದೀಯಾತ್ ಕ್ರಮ.—ಹೀಗೆ ಸಂಸ್ಥಾನದ ಜಮೆ ಮತ್ತು ಖರ್ಚಿನ ಪ್ರಕೃತಸ್ಥಿತಿಯನ್ನು ವಿವರಿಸಿದ್ದಾಯಿತು. ಮುಂದಿನ ಸಂಗತಿ ಏನಂದರೆ: ನಿಮಗೆ ಕೊಟ್ಟಿರುವ ನಿವ್ವಳ ಜಮಾಖರ್ಚಿನ ತಪ್ಪಿಗಳಿಂದ ರೈಲ್ವೆ ಉತ್ಪತ್ತಿಯನ್ನು ಮತ್ತು ರೈಲ್ವೆ ಮೂಲಧನದ ಮೇಲಿದ ಬಡ್ಡಿಯನ್ನು ವಿನಾಯಿಸಿದರೆ ಸಾಲಿಯಾನಾ ಸಿಲ್ಕ್ಕುಮುಂದಿನ ೫ ಸಂವತ್ಸರಗಳಲ್ಲಿ 15ಲಕ್ಷ ಉಳಿಯಬಹುದೆಂದು ಧಾರಾಳವಾಗಿ ಅಂದಾಜು ಮಾಡಬಹುದು. ಈ ಮೊಬಲಗಿಗೆ ರೈಲ್ವೆ ನಿವ್ವಳ ಉತ್ಪತ್ತಿಯ ¼ ಅಂಕವು ಸೇರಿಸತಕ್ಕದ್ದು. ಇವರ ಅಂದಾಜು ನಡೆಯುವ ಸಾಲಿನಲ್ಲಿ 3 ಲಕ್ಷವಾಗುತ್ತೆ. ಮುಂದಕ್ಕೆ ಪ್ರತಿ ಸಾಲಿನಲ್ಲಿಯೂ ಈ ಅಂಕವು ¼ ಲಕ್ಷದ ಪ್ರಕಾರ ಹೆಚ್ಚುತ್ತಾ ಬರುವದ್ದರಿಂದ 7 ಸಂವತ್ಸರಗಳಲ್ಲಿ 4¾ ಲಕ್ಷವಾಗುತ್ತೆ.

ಈ ಬಾಬತು ನಿವ್ವಳ ಒಟ್ಟು ಜಮೆಯಲ್ಲಿ ರೈಲ್ವೆ ಸಾಲಕ್ಕಾಗಿ ಕೊಡತಕ್ಕ ಬಡ್ಡಿಯು ಮತ್ತು ಸದರೀ ಸಾಲವನ್ನು ತೀರಿಸತಕ್ಕ ವೊಬಲಗು ಸಹ ಖರ್ಚು ಬಾಬಾಗಿರುತ್ತೆ. ಈ ಖರ್ಚನ್ನು ತೀರಿಸುವದಕ್ಕೆ ಮಾಡಿರುವ ವಿರ್ಪಾಡನ್ನು ಈಗ ವಿವರಿಸುತ್ತೀವೆ. ಶ್ರೀಮನಿವಾಹಾರ್ಥವಾಗಿ ಬ್ರಿಟಿಷ್ ಗವರ್ಮೆಂಟಿನವರಿಂದ ಪಡೆದ 80 ಲಕ್ಷ ರೂಪಾಯಿ ಸಾಲವುಈಗ ಪೂರ್ತಿಯಾಗಿ ತೀರಿಹರುತ್ತೆ. 1888ನೇ ಇಸವಿ ಡಿಸಂಬರ್ 31ನೇ ತಾರೀಖಿನಲ್ಲಿ ಈ ಸಾಲವು ಬೇಬಾಕ್ ಆಗುವದಕ್ಕೋಸ್ಕರ 1,99,404 ರೂಪಾಯಿ ಸಂದಾಯವಾಯಿತು. ಈ ದೇಕದಲ್ಲಿ ತೆಗದಿರುವ 20 ಲಕ್ಷ ರೂಪಾಯಿನ ರೈಲ್ವೆಸಾಲವನ್ನು ತೀರಿಸುವದಕ್ಕಾಗಿ ಬಂದು ಫಂಡ್ ಏರ್ಪಡಿಸಿರುತ್ತೆ. ಇದಕ್ಕಾಗಿ ಕಳೆದ ಡಿಸಂಬರಿನಲ್ಲಿ ಮೊದಲು ಕಿಸ್ತು ತರೀಕು 20,696 ರೂಪಾಯಿ ಕೊಟ್ಟಿದ್ದಾಯಿತು. ಚಾಲತಿ ಸಾಲಿನಲ್ಲಿಯೂ ಮತ್ತು ಮುಂದಿನ ಮೂರು ಸಾಲುಗಳಲ್ಲಿಯೂ ಸಾಲ್ 1ಕ್ಕೆ 4 ಲಕ್ಷ ರೂಪಾಯಿ ಪ್ರಕಾರಕ್ಕೂ ಮತ್ತು 1893-94ನೇ ಸಾಲಿನಲ್ಲಿ 2,71,905 ರೂಪಾಯಿಯೂ ಸದರೀ ಫಂಡಿಗೆ ಜಮೆ ಮಾಡಲ್ಪಡುತ್ತೆ. ಈ ವೊಬಲಗು ಮತ್ತು ಇವರ ಬಡ್ಡಿ ದೇಖೀಲ್ ಸಾಲ ತೀರಿಸಬೇಕಾದ 1902ನೇ ಇಸವಿಯಲ್ಲಿ 20 ಲಕ್ಷ ರೂಪಾಯಿ ಆಗುವದು.

1894—95ನೇ ವರ್ಷದ ಲಾಗಾಯಿತು ಇಂಗ್ಲ್ಯಾಂಡಿನಲ್ಲಿ ತೆಗದಿರುವ 12 ಲಕ್ಷ ಪೌಂಡಿನ ಸಾಲದ ವ್ಯವಸ್ತೆಗಾಗಿ ಬೇರೆ ಒಂದು ಫಂಡ್ ಏರ್ಪಡಿಸುತ್ತೆ. ಈ ಸಾಲವು 1936ನೇ ಇಸವಿಯಲ್ಲಿ ತೀರಿಸಬೇಕಾಗುತ್ತಾದ್ದರಿಂದ ಅದಕ್ಕೆ ಸಾಲಿಯಾನ 14,630 ಪೌಂಡ್ ದರ ರೂಪಾಯಿ 1ಕ್ಕೆ 1ಷಿ. 4 ಪೆ. ಮೇರಿಗೆ ಆಗುವ 2,19,450 ರೂಪಾಯಿ ಪ್ರಕಾರ 42 ಸಂವತ್ಸರ ಪಾವತಿಯಾಗಬೇಕಾಗಿರುತ್ತೆ. ಇದಲ್ಲದೆ ಫೋಲೆ ನಮೂದಾದ ಎರಡು ಸಾಲಗಳಿಗಾಗಿ ಬಡ್ಡಿ ಈ ದೇಶದಲ್ಲಿ ತೆಗದಿರುವ ಸಾಲಕ್ಕೆ 1 ಲಕ್ಷ ರೂಪಾಯಿ ಪ್ರಕಾರವೂ, ಇಂಗ್ಲ್ಯಾಂಡಿನಲ್ಲಿ ತೆಗದಿರುವ ಸಾಲಕ್ಕೆ 48,000 ಪೌನಿಗೆ ಸರಿಯಾದ 7,20,000 ರೂಪಾಯಿ ಪ್ರಕಾರವೂ ಸಾಲಿಯಾನ ಪಾವತಿಯಾಗಬೇಕಾಗಿದೆ. ಇದುವರಿವಿಗೂ ಮಾಡಿರುವ ದೇಣಿಗಾಗಿ ಪಾವತಿಮಾಡಬೇಕಾಗುವ ಈ ವೊಬಲುಗಳಲ್ಲದೆ, ಮುಂದಿನ 5 ಸಾಲುಗಳಲ್ಲಿ ಇನ್ನೂ ಆಗಬೇಕಾದ, ರೈಲ್ವೆಗಳಿಗಾಗಿಯೂ ಮತ್ತು ಕ್ಷಾಮ ನಿವಾರಣಾರ್ಥ ಮಾಡಬೇಕಾದ ಮುಖ್ಯವಾದ ನೀರಾವರಿ ಕಾಮಗಾರಿಗಳಿಗಾಗಿಯೂ ಸಾಲಿಯಾನ 12 ಲಕ್ಷ ರೂಪಾಯಿಗಳು ಒದಗಿಸಬೇಕಾಗಿದೆ, ಈಗ ನಿಮ್ಮಗಳಿಗೆ ತರ್ಜುಮೆಮಾಡಿ ಕೊಟ್ಟಿರುವ ತಕ್ಕ ಉದ್ದಿಷ್ಟವಾದ ನೀರಾವರಿ ಕಾಮಗಾರಿಗಳ ಪಟ್ಟಿಪ್ರಕಾರ ಇವುಗಳಿಗಾಗಿ ಈಗ ಮರಹವ್ಮತ್ ಇಲಾಖೆಗೆ ಕೊಟ್ಟ ರತಕ್ಕ 20 ಲಕ್ಷ ರೂಪಾಯಿಗಳಲ್ಲದೆ ಜಾಸ್ತಿಯಾಗಿ ಸರಾಸರಿ ಸಾಲ್ 1ಕ್ಕೆ 5½ ಲಕ್ಷ ರೂಪಾಯಿ ಕೊಡಬೇಕಾಗುತ್ತೆ. ಮತ್ತು ಮುಂದೆ ವಿವರಿಸುವಂತೆ ಯೋಚನೆಯಲ್ಲಿರುವ 250 ಮೈಲಿ ರೈಲ್ ರಸ್ತೆಗೆ 120 ಲಕ್ಷ ರೂಪಾಯಿ ಖಂಡವಾಳ ಬೇಕಾಗುತ್ತೆ. ಈಗ ಇಂಗ್ಲ್ಯಾಂಡಿನಲ್ಲಿ ತೆಗದಿರುವ 12 ಲಕ್ಷ ಪೌಂಡಿಗಳ ಸಾಲದ ಸಂಗಡಲೇ ಇವಕ್ಕಾಗಿ ಬೇಕಾಗುವ ಸಾಲವನ್ನು ಸಹ ತೀರಿಸಬೇಕಾದರೆ, ವರ್ಷಗಟ್ಟಲೆ ಸುಮಾರು 6½ ಲಕ್ಷ ರೂಪಾಯಿ ಬೇಕಾಗುತ್ತೆ. ಪ್ರಕೃತದಲ್ಲಿ ಪ್ರತಿ ಸಂವತ್ಸರವೂ 12 ಲಕ್ಷ ರೂಪಾಯಿ ಒದಗಿಸುವದಕ್ಕೆ ಅಸಮರ್ಥರಾಗಿರುವದ್ದರಿಂದ ಉದ್ದಿಷ್ಟವಾದ ಮರಹವ್ಮತ್ ಕಾಮಗಾರಿಗಳನ್ನು ಬದಲಾವಣಿ ಮಾಡಬೇಕಾದ ಅವಶ್ಯಕತೆಯೂ ಉಂಟಾಗಬಹುದು. ಮತ್ತು ಕಳೆದ ಸಂವತ್ಸರಗಳಲ್ಲಿ ಕೇಖರವಾಗಿರುವ ದ್ರವ್ಯವನ್ನು ಸದರಿ ಹೊಸರೈಲ್ ರಸ್ತೆಗಳಿಗೆ ವಿನಿಯೋಗಿಸತಕ್ಕದ್ದು ಸಹ ಅವಶ್ಯಕವಾಗಬಹುದು. ಈ ವಿಷಯಗಳು ಪ್ರಕೃತದಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬರವರ ಕೇವಲ ಜಾಗರೂಕವಾದ ಆಲೋಚನೆಯಲ್ಲಿವೆ. ಆದರೆ ಸಂಸ್ಥಾನದ ಉತ್ಪತ್ತಿ ಮೊಬಲಗಿನಲ್ಲಿ ಮೇಲೆ ನಮೂದಾದ ಖರ್ಚಿಲ್ಲದೆ ಸ್ವಲ್ಪ ಹೆಚ್ಚು ಕಡಮೆ ಆವಶ್ಯಕಗಳಾದ ಇನ್ನೂ ಅನೇಕ ಖರ್ಚುಗಳು ಇರುತ್ತವೆಯೆಂಬದು ಮರೆಯತಕ್ಕದ್ದಲ್ಲ:—ಅವು ಕೇಕದಾರಿ ಮತ್ತು ಅಮಲದಾರಿ ನೌಕರಿಗಳ ಅಭಿವೃದ್ಧಿ ಆಡಿಕ್‌ಮೇಲಣ ಸಾಯರ ತೆರಿಗೆಯನ್ನು ಅಥವಾ ಅಡಿಕೆ ತೋಟಗಳ ಮೇಲಿನ ಕಂದಾಯವನ್ನು ಪುನರ್ವಿಮರ್ಶೆ ಮಾಡುವದು, ಕ್ಷಾಮೋಪಶಮನಕ್ಕೋಸ್ಕರ ಒಂದು ಫಂಡನ್ನು ಕಲ್ಪಿಸುವದು ಇತ್ಯಾದಿಗಳು.

ಸಂಸ್ಥಾನದ ಮುಖ್ಯವಾದ ಇಲಾಖೆಗಳ ಆಡಳಿತವನ್ನು ಕುರಿತು ವಿಚಾರಮಾಡುವದರಲ್ಲಿ ಪ್ರಥಮತಃ ಪಬ್ಲಿಕ್ ವರ್ಕ್ಸ್‌ಯಾನೆ ಮರಹವ್ಮತ್ ಇಲಾಖೆಯ ವಿಷಯವಾಗಿ ಹೇಳಬೇಕಾದ್ದೇನೆಂದರೆ, ಕಳೆದ ಸಂವತ್ಸರ ಹರಿಹರದಿಂದ ಗುಬ್ಬಿವರಿಗಿನ ರೈಲ್‌ರಸ್ತೆಯ ಕಾಮಗಾರಿಯು ದಕ್ಷಿಣ ಮಹರಾಷ್ಟ್ರ ಕಂಪೆನಿಯವರಿಂದ ಅತಿಸಾಹಸದೊಡನೆ ಜರಿಗಿಸಲ್ಪಡುತ್ತಿದ್ದದ್ದನ್ನು ಸೂಚಿಸಿ ಇತ್ತಷ್ಟೆ. ಈ ಕೆಲಸವು ಈಚೆಗೆ ಪೂರೈಸಿ ಇರುತ್ತೆ. ಈ ರಸ್ತೆಯ ಪೈಕಿ ಮೈಸೂರಿಂದ ತಿಪಟೂರು ವರಿಗಿನ ನೈರುತ್ಯ ಭಾಗವೂ, ಮತ್ತು ತಿಪಟೂರಿನಿಂದ ಹರಿಹರದ ವರಿಗಿನ ಉತ್ತರಭಾಗವೂ ಸಹ ಪೂರೈಸಿದ್ದರಿಂದ ಆದ್ಯಂತವಾಗಿ ಮೈಸೂರಿಂದ ಹರಿಹರದ ವರಿಗಿನ ರಸ್ತೆಯು ಸಂಚಾರೋಪಯುಕ್ತವಾಗುವಹಾಗೆ ಕಳೆದ ತಿಂಗಳ 5ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದ್ದೂರವರು ಅವ್ಪಣೆ ದಯಮಾಡಿಸಿದರು. ಈ ಸಂಸ್ಥಾನಕ್ಕೆ ಈ ಮಹತ್ಕಾರ್ಯದಿಂದ ಲಭಿಸುವ ಪ್ರಯೋಜನಾಂಶವನ್ನು ಕುರಿತು ವಿಸ್ತಾರವಾಗಿ ಹೇಳುವದು ಅನಾವಶ್ಯಕವಾಗಿದೆ. ಈ ಪ್ರಯೋಜನಾಂಶವನ್ನು ಸಭಿಕರಾವ ನೀವೆಲ್ಲರೂ ಒಪ್ಪಿ ಇರುತ್ತೀರಿ. ಈಗಾಗಲೇ ಈ ದೇಶವೈಕೆ ವಿಸ್ತಾರವಾದ ವ್ಯಾಂತ್ಯವು ಕ್ಷಾಮದಿಂದುಂಟಾಗುವ ದುರವಸ್ಥೆಗಳಿಂದ ಸಂಪೂರ್ಣವಾಗಿ ಸಂರಕ್ಷಿತವಾಯಿತೆಂಬ ನೆನಪಿನಿಂದ ಸಾಖ್ಯವನ್ನನುಭವಿಸುತ್ತೇವೆ ಇಷ್ಟರಲ್ಲಿಯೇ ನಿಲ್ಲತಕ್ಕದ್ದು ನಂಮತಾತ್ಪರ್ಯವೆಲ್ಲ. ಮೈಸೂರಿಂದ ದಕ್ಷಿಣಕ್ಕೆ ಈ ಪ್ರಾಂತ್ಯದ ಸರಹದ್ದಿನಲ್ಲಿ ಗೂಡಲೂರುವರಿವಿಗೆ ಆಗುವ 54 ಮೈಲಿ ರೈಲ್‌ರಸ್ತೆಯು ಕಾಮಗಾರಿ ವಿಷಯವು ಇಂಡಿಯಾ ಗವರ್ನ್‌ಮೆಂಟಿನವರ ಆಲೋಚನೆಯಲ್ಲಿದೆ. ಇದರ ಪೈಕಿ ಪ್ರಥಮತಃ ಮೈಸೂರಿಂದ ನಂಜನಗೂಡಿನ ವರಿಗಿನ ಭಾಗವು ಈ ವರ್ಷದಲ್ಲಿಯೇ ಪ್ರಾರಂಭವಾಗುವ ಸಂಭವಕಾಣಬರುತ್ತೆ. ಇದು ಪೂರೈಸಿದನಂತರ ಕ್ರಮಶಃ ಬೆಂಗಳೂರಿಂದ ಹಿಂದೂಪುರದವರಿಗಿನ 54 ಮೈಲುಗಳೂ ಬೀರೂರಿನಿಂದ ಶಿವಮೊಗ್ಗೆವರಿಗಿನ 37 ಮೈಲ್ಗಳು. ಮತ್ತು ಅರಸೀಕೆರೆಯಿಂದ ಹಾಸನ ಹೊಳೇನರಸಿಪುರ ಯಡತೊರೆ ಮಾರ್ಗವಾಗಿ ಮೈಸೂರಿಗಿವರಿಗೂ ಮುಂದೆ ಪ್ರಾಯಶಃ ಫ್ರೇಜರಪೇಟೆವರಿಗಿನ 110 ಮೈಲಿಗಳು ತಯಾರಾಗುವಹಾಂದು ಕೋರಿಕೆ ಇದೆ. ಆದರೆ ಯಾವ ಕ್ರಮವನ್ನನುಸರಿಸಿ, ಎಷ್ಟು ಮಟ್ಟಿಗೆ ವರ್ಷಂ ಪ್ರತಿ ವರ್ಷವೂ ನಡೆಯುವದೋ ಈಗ ಹೇಳುವದು

989

ಅಸಾಧ್ಯವಾಗಿದೆ. ಈ ವಿಷಯವು ಮುಂದಿನ ವ್ಯವಸ್ಥಾನುಕೂಲತೆಯನ್ನೂ ಮತ್ತು ಈ ಸರ್ಕಾರಕ್ಕೂ ದಕ್ಷಿಣ ಮಹಾರಾಷ್ಟ್ರ ಕಂಪನಿಯವರಿಗೂ ನಡೆಯುವ ಕರಾರುಗಳನ್ನನುಸರಿಸಿ ವ್ಯವಸ್ಥೆಯಾಗತಕ್ಕದ್ದಾಗಿದೆ. ಪರಂತು ಈ ಸಂಗತಿಯು ಸದಾ ನಮ್ಮ ಆಲೋಚನೆಯಲ್ಲಿದೆ ಯೆಂತಲೂ ಮತ್ತು ಈ ಕೀಮೆಗೆ ಸಂಪೂರ್ಣವಾಗಿ ಬೇಕಾದ ಮಟ್ಟಿಗೆ ರೈಲ್ವೆ ರಸ್ತೆಯ ಏರ್ಪಾಟು ಸರ್ವ ಸಾಹಸದಿಂದಲೂ ನಡಿಸಲ್ಪಡುವದೆಂದು ನೀವು ದೃಢವಾಗಿ ನಂಬಬಹುದು.

ಕಳಿದ ಸಂವತ್ಸರದಲ್ಲಿ ಸೂಚಿಸಿದಂತೆ ಸಾಲಿಯಾನಾ ನಡೆಯುತಕ್ಕ ಮರಪಮ್ಮತ್ ಕಾಮುಗಾರಿಗಳ ಏರ್ಪಾಡು ಪಟ್ಟಾಗಿ ನಡೆಯುತ್ತಲಿದೆ. ಮತ್ತು ನಡೆಯುತ್ತಿರುವ ಸಾಲಿನ ಮರಪಮ್ಮತ್ ಬಡಜಟ್ಟಿನ್ನು ನೋಡಿದಲ್ಲಿ ಎಲ್ಲ ಬಾಬಿನಲ್ಲಿಯೂ ಏನು ನಡೆಯುತ್ತಿದೆ ಎನ್ನುವದು ನಿಕರವಾಗಿ ಗೊತ್ತಾಗುತ್ತೆ. ಪ್ರಕೃತದಲ್ಲಿ ಡಿಸ್ಟ್ರಿಕ್ಟ್ ಫಂಡ್ ಬಾಬತ್ತಿನ ಮೊಬಲಗನ್ನು ವಿನಾಯಿಸಿ ಉಳಿದ ಪ್ರೊವಿಷಿಯಲ್ ಫಂಡ್ ಬಡ್ಜಟ್ಟಿಬಾಬತ್ತು, 21 ಲಕ್ಷ ರೂಪಾಯಿ ಪೈಕಿ 41,913 ರೂ. ಮಿಲಟೇರೀ ಕಟ್ಟಡಗಳಿಗೂ, 2,93,396 ಸಿವಿಲ್ ಕಟ್ಟಡಗಳಿಗೂ, 5,78,162 ರಸ್ತೆಗಳಿಗೂ, 1,37,452 ಚಿಲ್ಲರೆ ಕೆಲಸಗಳಿಗೂ, 10,49,077 ನೀರಾವರಿ ಕಾಮುಗಾರಿಗಳಿಗೂ ವಿನಿಯೋಗಿಸತಕ್ಕದ್ದಾಗಿರುತ್ತೆ.

1ನೇ ಬಾಬಿನಲ್ಲಿನ ಅಂದಾಜು ಮೈಸೂರು ಫಾಜಿನವರಿಗೆ ಯೋಗ್ಯವಾದ ಮತ್ತು ಆರೋಗ್ಯಕರವಾದ ಬಾರ್ಕ್ಸ ಕಟ್ಟುವದಕ್ಕೋಸ್ಕರ ದಾಖಲಾಗಿರುತ್ತೆ.

2ನೇ ಬಾಬಿನಲ್ಲಿ ಮುಖ್ಯವಾದ ಖರ್ಚು ಈಗ ಮೈಸೂರಲ್ಲಿ ಸುತ್ತಮುತ್ತಲೂ ತಲೆದೋರುವ ಕಟ್ಟಡಗಳಿಗೂ ಶಿಥಿಲವಾದ ತಾಲ್ಲೂಕ್ ಕಛೇರಿಗಳಿಗೆ ಬದಲಾಗಿ ಕೆಲವು ತಾಲ್ಲೂಕುಗಳಲ್ಲಿ ಆಗಬೇಕಾದ ಹೊಸ ಕಛೇರಿಗಳಿಗೂ ಮತ್ತು ಅನೇಕ ವೈದ್ಯಶಾಲೆಗಳಿಗಾಗಿಯೂ ಖರ್ಚು ಆಗತಕ್ಕದ್ದಾಗಿದೆ. ಇಂತಾ ಔಷಧಶಾಲೆಗಳಿಗಿಂತ ಸರ್ಕಾರದ ಔದಾರ್ಯಕ್ಕೆ ಪಾತ್ರವಾದ ವಿಷಯಗಳು ದೊರೆಯಲಾರವು.

3ನೇ ರಸ್ತೆ ಬಾಬಿನಲ್ಲಿ ಬಜ್ಜಟ್ಟಿನ ಅಂದಾಜಿಕೆಯಿಕಿ ಭಾರೀಮೊಬಲಗು ಹರಿಹರಪುರ ಬಾಳೇಹೊನ್ನೂರು, ಬೇಲೂರು, ಈ ಸ್ಥಳಗಳಲ್ಲಿ ತಯಾರಾಗುವ ದೊಡ್ಡ ಕೇತುವೆಗಳಿಗೆ ಕೊಟ್ಟಾಯಿತೆ. ಮಿಕ್ಕ ಮೊಬಲಗು ರೈಲ್ವೆ ಫೀಡರ್ ರಸ್ತೆಯಾನೆ ರೈಲ್ ಸ್ಟೇಷನ್ನಿಗೆ ಬರತಕ್ಕ ಮಾರ್ಗಗಳು, ಮುಸಾಫರಿಖಾನೆಗಳು, ಮತ್ತ ವರ್ಷೆವರ್ಷ ಹೆಚ್ಚುತ್ತ ಬರುವ ರಸ್ತೆಯ ಸಾಲಾಬಾದ್ ಕಾಮುಗಾರಿಗಳಿಗೂ ಹಂಚಿಹೋಗಿದೆ.

4ನೇ ಬಾಬು ಅಂದರೆ ಆನೋಪಯೋಗಾರ್ಥವಾದ ಚಿಲ್ಲರೇ ಕಾಮುಗಾರಿಗಳ ಬಾಬಿಗೆ ನಿರ್ದೇಶಿಸಿ ಇರುವ ಪ್ರಾಯಶಃ ವಿಶಿಷ್ಟವೊಬಲಗೂಮೈಸೂರು ಪಟ್ಟಣಕ್ಕೆ ನೀರಿನ ಸರಬರಾಯಿಗೂ, ಮೊಹರೀ ದುರಸ್ತಿಗೂ ಮತ್ತು ಸಂಸ್ಥಾನದ ದಕ್ಷಿಣದ ರಾಜಧಾನಿಯಾದ ಈ ಮೈಸೂರು ಪಟ್ಟಣವನ್ನು ಅದರ ಗಣ್ಯತೆಗೂ ಅದರ ಪುರಾತನವಾದ ಕೀರ್ತಿಗೂ ಅನುಗುಣವಾದ ಸ್ಥಿತಿಗೆ ತರಬೇಕಾದ್ದಕ್ಕಾಗಿ ಬೇಕಾಗುತ್ತೆ.

5ನೇ ಬಾಬಿನಲ್ಲಿ ತಪಶೀಲಾಗಿ ಬಡಜಟ್ ಅಂದಾಜಿನಲ್ಲಿ ನಮೂದಿಸುವ ತಾಲ್ಲೂಕುಗಳು ಮತ್ತು ನಾಲೆಗಳ ದೊಡ್ಡ ಪಟ್ಟಿಯನ್ನು ನೋಡಿದರೆ ಕೀಮೆಯ ಮೇಲೆ ಎಲ್ಲಾ ಕಡೆಯಲ್ಲಿಯೂ, ಅವಶ್ಯಕವಾದ ಕಾಮಗಾರಿಗಳಿಗೆ ನಿಗೆ ಕೊಟ್ಟಿದೆಯನ್ನುವದು ದೃಷ್ಟಾಂತಕ್ಕೆ ಬರುತ್ತೆ. ಈ ಪೈಕಿ ಪ್ರತಿವಂದು ಕಾಮುಗಾರಿಯು ತಪಶೀಲನ್ನೂ ವಿವರಿಸುತ್ತಾ ಬಂದರೆ, ಅನಾವಶ್ಯಕವಾಗಿ ನಿಮ್ಮ ಕಾಲವ್ಯಯಕ್ಕೆ ಕಾರಣವಾಗುವದು; ಆದರೆ ಸದರೀ ಪಟ್ಟಿಯಲ್ಲಿ ಈ ಸಭೆಗೆ ಬಂದಿರತಕ್ಕ ಪ್ರತಿ ಮೆಂಬರೂ ತಮ್ಮತಮ್ಮ ತಾಲ್ಲೂಕಿಗೆ ಮುಖ್ಯವಾಗಿ ಪ್ರಯೋಜನಕಾರಿಯಾದ ಕಾಮುಗಾರಿಗಳು ಸೇರಿವೆಯಂಬುವದನ್ನು ತಿಳಿಯಬಹುದು. ಬಂದು ವೇಳೆ ಆಲೋಚನೆಗೆ ಯೋಗ್ಯವಾದ ಕಾಮುಗಾರಿಗಳು ಯಾವದಾದರೂ ಬಿಟ್ಟು ಹೋಗಿದ್ದಲ್ಲಿ ತಿಳಿಸೋಣ ಮಾತ್ರದಿಂದಲೇ ನಮ್ಮ ಇಂಜನಿಯರುಗಳು ಕ್ರಮವಾಗಿ ಅವುಗಳಿಗೆ ನಿಗೆ ಕೊಡುವರು.

ಮರಪಮ್ಮತ್ ಬಾಬಿನ ಬಡಜಟ್ಟಿನಲ್ಲಿ ಡಿಸ್ಟ್ರಿಕ್ಟ್ ಫಂಡ್ ಸೇರಿ ಇದ್ದರೂ ಅದರ ತಪ್ಸೀಲನ್ನು ಈ ಮೇಲೆ ವಿವರಿಸಿ ಇಲ್ಲ. ಈ ಫಂಡ್ ಪ್ರೊವಿಷಿಯಲ್ ಫಂಡಿಗೆ ಸೇರದೆ ಪ್ರತ್ಯೇಕವಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಈ ಫಂಡಿನ ಆಡಳಿತವು ನಡೆಸಲ್ಪಡುತ್ತೆಂಬುವದೂ ಮತ್ತು ಸದರೀ ಬೋರ್ಡಿನವರಿಂದ ಕಾಮುಗಾರಿಗಳು ನಿರ್ದೇಶಿಸಲ್ಪಟ್ಟು ಡಿಸ್ಟ್ರಿಕ್ಟ್ ಫಂಡಿನಿಂದ ಹಣ ವದಗಿಸಲ್ಪಡುವ ಮೇರಿಗೆ ಇಂಜನಿಯರವರ ಮೂಲಕ ಕಾಮುಗಾರಿ ನಡೆಯುತ್ತೆಂಬುವದು ನಿಮಿಗೆ ತಿಳಿದಿರುತ್ತೆ, ಈ ಫಂಡು ಆಯಾಯ ಪ್ರಾಂತ್ಯದ ರಸ್ತೆಗಳಿಗೂ ಮತ್ತು ಅಲ್ಲಲ್ಲಿ ಅವಶ್ಯಕವಾದ ಸ್ಥಳೀಕ ಚಿಲ್ಲರೆ ಕೆಲಸಗಳಿಗೂ ಸಂಪೂರ್ಣವಾಗಿ ವಿನಿಯೋಗವಾಗುತ್ತೆ. ಈ ಡಿಸ್ಟ್ರಿಕ್ಟ್ ಫಂಡಿನ್ ಒಟ್ಟು ಮೊಬಲಗು ಅತ್ಯಲ್ಪವಲ್ಲವೆ 5,26,000 ರೂಪಾಯಿ ವರೆಗೂ ಇದ್ದರೂ, ಆಯಾಯ ಪ್ರಾಂತ್ಯಗಳಲ್ಲಿ ಸ್ಥಳರಸ್ತೆಗಳು

990

ವಿಶೇಷವಾಗಿ ಹೆಚ್ಚಿ ಇರುವದರಿಂದಲೂ ಮತ್ತು ಅವುಗಳನ್ನು ಪ್ರಕೃತ ಸ್ಥಿತಿಗಿಂತಲೂ ಉತ್ತಮಸ್ಥಿತಿಗೆ ತರಬೇಕಾದದ್ದು ಅವಶ್ಯಕವಾದದ್ದರಿಂದಲೂ ಈ ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದ್ ಕಾಮುಗಾರಿಗಳು ನಡೆಯುತ್ತಿರುವ ಅನೇಕವಾದ ಮುಖ್ಯ ಭಾಟೂ ಮಾರ್ಗಗಳನ್ನು ಪ್ರೊವಿಷಿಯಲ್ ಫಂಡಿಗೆ ವರ್ಗ ಮಾಡಲಾಯಿತು. ಇವುಗಳ ಪೈಕಿ ಅನೇಕ ಪೂರ್ವದಲ್ಲಿ ಪ್ರೊವಿಷಿಯಲ್ ಫಂಡಿನಿಂದಲೇ ರಿಪೇರಾಗುತ್ತಿದ್ದವು. ಇದರಿಂದ ಡಿಸ್ಟ್ರಿಕ್ಟ್ ಫಂಡ್ ಮೇಲಿನ ಭಾರವು ತಗ್ಗಿ ಪ್ರೊವಿಷಿಯಲ್ ಫಂಡ್ ಇದನ್ನು ವಹಿಸುತ್ತಲಿದೆ. ಇನ್ನು ಮುಂದೆ ಕೆಲವು ಕಾಲ ಹೀಗೆಯೇ ವಹಿಸಬೇಕಾಗುತ್ತೆ. ಇತಃಪರ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮಾಯ ಪ್ರಾಂತ್ಯದ ರಸ್ತೆಗಳನ್ನು ಒಳ್ಳೇ ಸ್ಥಿತಿಗೆ ತರುವದಕ್ಕೂ ಮತ್ತು ಅತ್ಯವಶ್ಯಕವಾಗಿ ನಡೆಯಬೇಕಾದ ಪ್ರಜಾಕೋಗ್ಯಕರವಾದ ಕಾಮುಗಾರಿಗಳನ್ನ ನಡಿಸುವದಕ್ಕೂ ಅವಕಾಶವಾಗುವ ಹಾಗಾಯಿತು. ಇದಕ್ಕೆ ನೀವು ಸಮ್ಮತಿಸಿ ಸಹಾಯಕರಾಗಿರುವಿರೆಂದು ನಂಬುತ್ತೇವೆ. ಮತ್ತು ಇಂಥಾ ಪ್ರಮೇಯಗಳಲ್ಲಿ ನಿಮ್ಮಗಳ ಸಹಾಯವೂ ಮತ್ತು ದೇಶದಲ್ಲಿ ಮುಖಂಡರಾಗಿಯೂ ಪ್ರಾಜ್ಞರಾಗಿಯೂ ಇರುವ ಎಲ್ಲರ ಸಹಾಯವೂ ಇಲ್ಲದಿದ್ದ ಪಕ್ಷದಲ್ಲಿ ಮೇಲೆ ನಮೂದಿಸಿರುವ ಜನಾರೋಗ್ಯಕರವಾದ ಕೆಲಸಗಳನ್ನ ಉಪಕ್ರಮಿಸಿ ನಿರ್ವಹಿಸುವದು ಸರ್ಕಾದವರಿಗೂ ಲೋಕಲ್ ಬೋರ್ಡಿನವರಿಗೂ ಅಸಾಧ್ಯವಾಗಿರುವದು.

ಕಳಿದ ಸಂವತ್ಸರದಲ್ಲಿ ನೀರಾವರಿ ಕಾಮಗಾರಿಗಳಿಗಾಗಿ ಹಿಂದಿನ 6 ಸಾಲುಗಳಲ್ಲಿ ಆದ ಖರ್ಚನ್ನೂ ಸದರೀ ಖರ್ಚಿನಲ್ಲಿ ಪ್ರತಿ ಸಂವತ್ಸರದಲ್ಲಿಯೂ ಅಧಿಕವಾಗುತ್ತಾ ಬಂದದ್ದನ್ನೂ ಸಹ ತಿಳಿಸಿರುತ್ತಷ್ಟೆ. ಆಗಿನ ತಪ್ಪಿ ಪ್ರಕಾರಕ್ಕೆ 1881—82ನೇ ಇಸವಿಯಲ್ಲಿ 3,28,368 ರಿಂದ 1887—88ನೇ ಸಾಲಿನಲ್ಲಿ 7,14,277ರ ವರಿಗೂ ಖರ್ಚು ಹೆಚ್ಚಿದ್ದು ಕಂಡುಬಂತು. ಈಗ 1888—89ನೇ ಸಾಲಿನಲ್ಲಿ 9,61,950ರ ವರಿಗೂ ಖರ್ಚಾಯಿತು. ಮತ್ತು ಈಗ ನಡೆಯುವ ಸಾಲಿನಲ್ಲಿ 10½ ಲಕ್ಷ ಖರ್ಚಾಗಬಹುದೆಂದು ನಿರೀಕ್ಷಣೆ ಇದೆ.

ಹೀಗೆ ಹಿಂದೆ ನಡೆದ ಮತ್ತು ಈಗ ನಡೆಯುತ್ತಿರುವ ಕಾಮಗಾರಿಗಳ ವಿವರವನ್ನು ಹೇಳಿ ಮುಂದೆ ನಡೆಯಬೇಕಾದ ಕಾಮಗಾರಿಗಳ ವಿಷಯವು ಸಂಕ್ಷೇಪವಾಗಿ ಹೇಳಲ್ಪಡುತ್ತೆ. ಮೇಲೆ ಸೂಚಿಸಿದ ಕಾಮಗಾರಿಗಳ ಅಂದಾಜಾಪಟ್ಟಿಯು ಪಬ್ಲಿಕ್ ವರ್ಕ್ಸ್ ಸೆಕ್ರೆಟರೀ ಕಛೇರಿಯಲ್ಲಿ ಬಹಳ ಚನ್ನಾಗಿ ಪರಿಶೋಧಿಸಲ್ಪಟ್ಟು ತಯಾರಾಗಿದೆ. ಇದರಲ್ಲಿ ಎಲ್ಲಾ ಅನುಕೂಲವಾಗಿರುವ ಪಕ್ಷದಲ್ಲಿ ಮುಂದಿನ 5 ವರುಷಗಳ ಒಳಗೆ ನಡಿಸಬೇಕೆಂದು ಯೋಚಿಸಿರುವ 20,000 ರೂಪಾಯಿಗೆ ಮೇಲ್ಪಟ್ಟ ಮುಟ್ಟುವಳಿ ತಗಲುವ ಕಾಮಗಾರಿಗಳು ಸೇರಿರುತ್ತವೆ. ಸದರೀ ತಪ್ಪೀ ಪ್ರಕಾರ ಇದರಲ್ಲೀ ಕಂಡಂತೆ ವರ್ಷಗಟ್ಟೆಲೆ ಖರ್ಚಾಗುತ್ತೆ, ಇದರಲ್ಲಿ ಚಿಲ್ಲರೆ ಕಾಮಗಾರಿಗಳು ರಿಪೇರಿ ಮತ್ತು ದುರಸ್ತಿ ಬಾಬುಗಳು ಸೇರಿ ಇಲ್ಲ.

				ರೂಪಾಯಿಗಳು.
1890—91	..	..	..	9,19,300
1891—92	..	..	..	13,53,000
1892—93	..	..	..	14,77,000
1893—94	..	..	..	15,41,000
1894—95	..	..	..	15,29,000

ಇದರಲ್ಲಿ ಅವಶ್ಯಕವಾದ ಎಲ್ಲ ಮಿಲಿಟರಿ, ಸಿವಿಲಯಾನಿ ಮುಖ್ಯ ಕಟ್ಟಡಗಳು, ರಸ್ತೆಗಳು ಮತ್ತು ಚಿಲ್ಲರೇ ಸಾರ್ವಜನೋಪಯೋಗ ಕೆಲಸಗಳು ಸೇರಿರುತ್ತವೆ. ನೀರಾಸರೆ ಕಾಮಗಾರಿಗಳಲ್ಲಿ ಮುಂಜೂರಾದ ಮತ್ತು ಕೂಡ್ಲೆ ಮುಂಜೂರಾಗತಕ್ಕ ಭಾರಿ ಕಾಮಗಾರಿಗಳು ಮತ್ತು ತಜವೀಜಿನಲ್ಲಿರುವ ಆಳಿಕರ ಮತ್ತು ಅಥವಾ ಸಾಧ್ಯವೆಂದು ಇದುವರಿಗೂ ನಿಶ್ಚಯಿಸದೆ ಇರುವ ಕಾಮಗಾರಿಗಳು ಸಹ ಸೇರಿರುತ್ತವೆ. ಪ್ರಕೃತ ಸ್ಥಿತಿಯಲ್ಲಿ ಯಾವಯಾವ ಕಾಮಗಾರಿಗಳು ಸಫಲವಾಗಬಹುದೆಂಬ ತೋರಿವೆಯೋ ಅವುಗಳೆಲ್ಲಾ ಚುನಾಯಿಸಲ್ಪಟ್ಟಿದೆ ಎಂತ, ಹೇಳಬಹುದು. ಪ್ರಸಿದ್ಧವಾದ ಮಾರೀಕಣಿವೆ ಅಣೆಯೂ ಸೇರಿ ಇದೆ. ಹೊಸದಾಗಿ ಶ್ರೀಮನ್ಮಹಾರಾಜ ರಾಜಾಸಾಹೇಬರ ಬಹದ್ದೂರವರ ಹೆಸರಿಟ್ಟು ಕಾವೇರೀಗೆ ಅಡ್ಡವಾಗಿ ತಯಾರಾಗುವ ಅಣೆಯೂ ಸೇರಿ ಇದೆ. ಈ ಅಣೆಯಿಂದ ವಿಸ್ತಾರವಾಗಿ ತರೀ ಸಾಗುವಳಿಯಾಗುವದಲ್ಲದೆ ಹಳೇ ಚಿಕ್ಕದೇರಾಯಸಾಗರ ನಾಲೆ, ವಿರಜಾನದೀ ನಾಲೆ, ಮತ್ತು ದೇವರಾಯ ನಾಲೆ, ಅಚ್ಚು ಕಟ್ಟುಗಳಿಗೆ ನೀರಿನ ಸರಬರಾಯಿಯೂ ಚನ್ನಾಗಿ ಕ್ರಮಪಡುವದು. ಸದರೀ ಪಟ್ಟಿಲಿ ಸೇರಿ ಇರತಕ್ಕ ನೀರಾವರಿ ಕಾಮಗಾರಿಗಳಿಗೆ ಒಟ್ಟಾಮುಳಿ 90½ ಲಕ್ಷ ಖರ್ಚು ತಗಲುತ್ತೆ. ಈ ಮುಟ್ಟುವಳಿಯು ಹಾಲಿ ನಡೆಯುವ ಸಾಲಿಗೂ ಮುಂದಿನ 5 ಸಾಲುಗಳಿಗೂ ಈ ಕೆಳಗೆ ವಿವರಿಸಿರುವಂತೆ ಹಂಚಬೇಕಾಗುತ್ತೆ.

991

				ರೂಪಾಯಿಗಳು.
1888—89	..	..	..	5,79,000
1889—90	..	..	..	9,75,000
1890—91	..	..	..	10,08,000
1891—92	..	..	..	11,51,500
1892—93	..	..	..	12,42,000
1893—94	..	..	..	12,90,000

ಇದರಿಂದ ಮುಂದೆ ಸಾಲಿಗಳಲ್ಲಿ 28 ಲಕ್ಷ ರೂಪಾಯಿಗಳು ಒದಗಿಸಬೇಕಾದ್ದು ಉಳಿಯುತ್ತೆ. ಮೇಲೆ ವಿವರಿಸುವದು ಮುಂದಣ 5 ಸಾಲಿಗಳಲ್ಲಿ ನಡೆಯಬಹುದಾದ್ದಕ್ಕೆ ವಿಸ್ತಾರವಾದ ಮತ್ತು ತೃಪ್ತಿಕರವಾದ ಅಂದಾಜಾಗಿರುತ್ತೆ. ಆದರೆ ಇದು ಸಮಗ್ರವಾಗಿ ನಡದೀತೋ ಇಲ್ಲವೋ ಎನ್ನುವದು ವರ್ಷೇವರ್ಷೆ ಖಜಾನೆಯಲ್ಲಿ ಉಳಿಯುವ ಮೊಬಲಗಿಗನುಸಾರವಾಗಿರುತ್ತೆ. ಈಗ ಈ ಭಾಗದಲ್ಲಿ ತಿಳಿಯ ಪಡಿಸಬಹುದಾದ್ದೇನಂದರೆ :—ಸಾಧ್ಯವಾದ ಮಟ್ಟಿಗೂ ಮತ್ತು ಹಣ ಒದಗಿದಹಾಗೂ ಈ ಅಂದಾಜ್ ಪಟ್ಟಿಯನ್ನನುಸರಿಸಿ, ವರ್ತಿಸಬೇಕಾದದ್ದು ನಮ್ಮ ಅಭಿಪ್ರಾಯವಾಗಿದೆ. ಈ ಅಂದಾಜು-ವರ್ಷೇವರ್ಷೆ ಪ್ರಾಬಲ್ಯಸ್ಥಿತಿಗೆ ಬರುತ್ತಿರುವ ನಮ್ಮ ಮುರಡಮ್ಮತ ಏರ್ಪಾಡನ್ನು ವಿಶದವಾಗಿ ವ್ಯಕ್ತಪಡಿಸುತ್ತೆ. ಇದರ ತರ್ಜುಮೆಯನ್ನು ನಿಮ್ಮಗಳಿಗೆ ಕೊಟ್ಟಿರುವದಾಗಿರುತ್ತೆ, ನಿಮ್ಮ ಸ್ಥಳದ ಮಾಹೀಯತ್ತಿನಿಂದ ನೀವುಗಳು ಇದರಲ್ಲಿ ಬದಲಾಯಿಸತಕ್ಕದ್ದಕ್ಕೂ ಅಥವಾ ಹೆಚ್ಚಾಗಿ ಸೇರಿಸುವದಕ್ಕೂ ಮಾಡುವ ಸಲಹೆಗಳು ಯೋಚನೆಯಲ್ಲಿ ತರಲು ಸಂತೋಷಿಸುತ್ತೇವೆ.

ತಲಾವ್ ದುರಸ್ತಿ ವಿಷಯ.—ಮುರಹವ್ಮತ್ ಇಲಾಖೆಯ ಆಡಳಿತದ ಪ್ರಸಕ್ತಿಯ ಸಂದರ್ಭದಲ್ಲಿ ಕೆರೆಗಳ ಸಾಲಾಬಾದು ಕಾಮಗಾರಿಯ ಏರ್ಪಾಡನ್ನು ಕುರಿತು ಪ್ರಸ್ತಾಪಿಸದೆ ಈ ವಿಷಯವನ್ನು ಮುಗಿಸಲಿಕ್ಕೆ ಆಗಲಾರದು. ಈ ಸಂಗತಿಯು ಕಳೆದ 2 ಸಂವತ್ಸರಗಳಲ್ಲಿ ನಿಮ್ಮ ಅಲೋಚನೆಗೆ ಬಳಪಟ್ಟಿಯಿತ್ತು. ಇದಕ್ಕೆ ಈಗಲೂ ನಮ್ಮ ಡಿಸ್ಟ್ರಿಕ್ಟ್ ಅಭೀಸರುಗಳು ಸಂಪೂರ್ಣವಾಗಿ ನಿಗಾವನ್ನೆ ಕೊಡುತ್ತಲಿದಾರೆ. ಅನೇಕ ತಾಲ್ಲೂಕುಗಳಲ್ಲಿ ವಿಶೇಷವಾಗಿ ಕಾಮಗಾರಿಗಳು ಜರಿಗಿ ಈ ಏರ್ಪಾಡಿಗಾಗಿ ಮಾಡಿದ ಪ್ರಯತ್ನವು ಸಫಲವಾಗಿರುತ್ತೆ, ಮತ್ತು ರೈತರು ಈ ಏರ್ಪಾಡಿನ ಸಫಲತೆಯಿಂದ ಸಾಕ್ಷಾತ್ತಾಗಿ ತಮಗುಂಟಾಗುವ ಅತ್ಯಂತ ಪ್ರಯೋಜನವನ್ನು ತಿಳಿದು ಒಪ್ಪಿಕೊಳ್ಳುತ್ತಲಿದ್ದಾರೆ. ಆದರೆ ಇನ್ನೂ ಕೆಲವು ತಾಲ್ಲೂಕುಗಳಲ್ಲಿಯೂ ಆ ಕೈಕೆ ಮುಖ್ಯವಾಗಿ ಕೋಲಾರದಲ್ಲಿ ರೈತರು ಇನ್ನೂ ಹಿಂದಾಗಿಯೆ ಇದಾರೆ. ಆದರೂ ಸಿವಮೊಗ್ಗಾ ಅರಕೀಕೆರೆ, ಹರಿಯೂರು, ಮಂಡಿಯಾ ಈ ತಾಲ್ಲೂಕುಗಳಲ್ಲಿ ರೈತರು ತಮ್ಮ ಒಳ್ಳೇ ನಡತೆಯಿಂದ ಈ ಭಾಗದಲ್ಲಿ ತೋರಿಸಿರುವ ಪ್ರವರ್ತನೆಯನ್ನು ದೇಶದಲ್ಲಿ ಇತರವೆಲ್ಲಾ ತಾಲ್ಲೂಕಿನವರೂ ಅನುಕರಿಸಿ ವರ್ತಿಸುವರೆಂದು ಕೋರಿಕೆಯಿದೆ. ನಿಮ್ಮಗಳಿಗೆ ನಿಮ್ಮನಿಮ್ಮ ತಾಲ್ಲೂಕಿನ ರೈತರುಗಳಲ್ಲಿ ಇರತಕ್ಕ ಗೌರವವನ್ನೂ ಮಾತುವಾಸಿಯನ್ನೂ ಉಪಯೋಗಿಸಿ ಅತ್ಯಂತವಾಗಿ ರೈತರ ಕ್ಷೇಮಕ್ಕೂ ಪ್ರಯೋಜನಕ್ಕೂ ಕಾರಣವಾದ ಈ ಕೆರಗಳ ಉಪರಕ್ಷಣೇ ಕೆಲಸವನ್ನ ವಿಸ್ತಾರವಾಗಿ ಜರಿಗಿಸಬೇಕೆಂದು ತಿಳಿಸುತ್ತೇವೆ.

ಮುಲ್ಕೀ ಆಡಳಿತ.—ಹೊಸ ರೆವಿನ್ಯೂಕೋಡು ಜಾರಿಗೆ ಬಂದ ಸಮಯವನ್ನು ವಲಂಬಿಸಿ ಗವರ್ನ್ಮೆಂಟಿನವರ ರೂಬರೂಬ್ ದಾಖಲಾಗತಕ್ಕ ಅಪ್ಪೀಲ್ ಮತ್ತು ಪುನರ್ವಿಮರ್ಶೆ ಮೊಕದ್ದಮೆಗಳನ್ನ ಕ್ರಮವಾಗಿ ವಿಚಾರಿಸಿ ವ್ಯವಸ್ಥೆಪಡಿಸತಕ್ಕದ್ದಕ್ಕೆ ಹೊಸದಾಗಿ ಏರ್ಪಾಟು ಮಾಡಲ್ಪಟ್ಟಿದೆ. ಸದರೀ ರೆವಿನ್ಯೂ ಕೋಡು ಪ್ರಕಾರ ರೆವಿನ್ಯೂ ಅಧಿಕಾರಿಗಳ ತೀರ್ಮಾನಕ್ಕೆ ಬರುವ ಕೆಲವು ಮುಖ್ಯ ವಿಷಯಗಳು ಸಿವಿಲ್ ಕೋರ್ಟಿನ ಅಧಿಕಾರಕ್ಕೆ ಒಳಪಟ್ಟಿಲ್ಲಾ ಇಂಥಾ ವಿಷಯಗಳನ್ನು ಮತ್ತು ಜುಡಿಷಿಯಲ್ ಸ್ವಭಾವದ ಹಕ್ಕುದಾರಿಗಳನ್ನು ವಿಷಯೀಕರಿಸಿಕೊಂಡಿರುವ ಇತರ ಸಂಗತಿಗಳನ್ನು ವ್ಯವಹಾರಕ್ಕೆ ಸಂಬಂಧಪಟ್ಟ ಕಕ್ಷಿಗಾರ್ರುಗಳ ವಿವಾದವನ್ನು ಅವರು ತಿಳಿಸಲಪೇಕ್ಷಿಸುವ ಅಂಶಗಳನ್ನೆ ಸಂಪೂರ್ಣವಾಗಿ ಕೇಳಿ ವಿಚಾರ ನಡಿಸದೆ ಅಖೈರಾಗಿ ಫೈಸಲ್ ಮಾಡತಕ್ಕದ್ದು ಯುಕ್ತವಲ್ಲವಾಗಿದೆ. ಈ ಕಾರಣದಿಂದ ಗವರ್ನ್ಮೆಂಟಿಗೆ ದಾಖಲಾಗತಕ್ಕ ಅಪ್ಪೀಲ್ ಮತ್ತು ಪುನರ್ವಿಮರ್ಶೆ ಮೊಕದ್ದಮೆಗಳೆಲ್ಲವೂ, ಇಬ್ಬರಿಗಿಂತ ಕಮ್ಮಿ ಇಲ್ಲದಂತೆ ಕೌನ್ಸಿಲ್ ಮೆಂಬರುಗಳಿಂದ ವಿಚಾರಿಸಲ್ಪಟ್ಟು ವ್ಯವಸ್ಥೆಮಾಡತಕ್ಕದ್ದೆಂದ್ದನ್ನೂ, ಸಿವಿಲ್ ಕೋರ್ಟುಗಳಲ್ಲಿ ಆಚರಿಸತಕ್ಕ ವಿಧಾನವನ್ನೇ ಮುಖ್ಯಾಂಶಗಳಲ್ಲಿ ಅನುವರ್ತಿಸಬೇಕೆಂಬುವದನ್ನೂ ಮೇಲಿರುವ ಫೈಸಲಾತಿಗಳನ್ನು ಮಾಹೆಯಾನ ಪ್ರಕಟಿಸಬೇಕೆಂದು ಶ್ರೀಮನ್ಮಹಾರಾಜ ರಾಜಾಸಾಹೇಬರವರ್ದ್ದಾರವರು ಆಜ್ಞಾಪಿಸಿದಾರೆ.

ಜುಡಿಷಿಯಲ್ ಬದಲಾವಣೆಗಳು.—ಬೆಂಗಳೂರಿನಲ್ಲಿ, ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್‌ಕೋರ್ಟು ಪುನಶ್ಚ ಸ್ಥಾಪಿಸ ಬೇಕೋ ಅಥವಾ ಚೀಫ್ ಕೋರ್ಟಿನ ಮೂರುಜನ ಜಡ್ಜ್‌ರಲ್ಲಿ ಒಬ್ಬರು ಕೊಟ್ಟ ಫೈಸಲಿನ ಮೇಲೆ ಅಪ್ಪೀಲ್ ಡಾಖಲಾಗುವದನ್ನು ಆ ಮೂರು ಜಡ್ಜ್‌ಯರೇ ಕಲಿತು ಫೈಸಲ್ ಮಾಡತಕ್ಕ ಆ ವ್ಯವಸ್ಥೆಯನ್ನು ನಿವಾರಣೆಮಾಡುವದಕ್ಕೆ ಉಪಾಯಾಂತರವನ್ನು ಕಲ್ಪಿಸಬೇಕೋ ಎಂಬ ಸಂಗತಿ ಈಚಿಗೆ ಗವರ್ಮೆಂಟಿನವರ ಆಲೋಚನೆಯಲ್ಲಿತ್ತು. ಪ್ರಜೆಗಳಿಗೆ ನ್ಯಾಯವಿಮರ್ಶೆಯನ್ನು ಇನ್ನೂ ಚನ್ನಾಗಿ ನಡಿಸಲು ಪ್ರಕೃತಕ್ಕಿಂತ ಉತ್ತಮವಾದ ಏರ್ಪಾಡು ಮಾಡಬೇಕಾದ್ದು ಬಹಳದಿವಸದಿಂದ ಅವಶ್ಯಕ ಕಂಡುಬಂದಿರುತ್ತೆ. ಆದರೆ ಜೀರೆ ಡಿಸ್ಟ್ರಿಕ್ಟ್ ಕೋರ್ಟು ಸ್ಥಾಪಿಸಿದ ಮೇಲೆ ಚೀಫ್ ಕೋರ್ಟಿನ ಮೂರು ಜಡ್ಜ್‌ರಿಗೂ ತಕ್ಕಷ್ಟು ಕೆಲಸವನ್ನು ವಿಂಗಡಿಸುವದು ಕಷ್ಟವಾಗಿ ತೋರಿರುತ್ತೆ. ಈ ವಿಷಯವನ್ನು ಈಚಿಗೆ ಸಂಪೂರ್ಣವಾಗಿ ಯೋಚಿಸಿದ್ದರ ಮೇಲೆ ಬೆಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟನ್ನು ಸ್ಥಾಪಿಸಿ ಈ ಕೋರ್ಟು ಕ್ರಿಮಿನಲ್ ಬಾಬಿನಲ್ಲಿ ಸೆಷನ್ಸ್ ಕೋರ್ಟಿಗೆ ಬರತಕ್ಕ ಒರಿಜಿನಲ್ ಮತ್ತು ಅಪ್ಪೀಲ್ ಮೊಕದ್ದಮೆಗಳನ್ನೂ ಮತ್ತು ಸಿವಿಲ್ ಬಾಬಿನಲ್ಲಿ ಡಿಸ್ಟ್ರಿಕ್ಟ್ ಕೋರ್ಟಿಗೆ ದಾಖಲಾಗತಕ್ಕ ಸಿವಿಲ್ ಒರಿಜಿನಲ್ ಮೊಕದ್ದಮೆಗಳನ್ನೂ ತೆಗದುಕೊಳ್ಳತಕ್ಕದ್ದೆಂತಲೂ, ಚೀಫ್ ಕೋರ್ಟಿನವರು ನೇಮಿಸಿದಂಥ ಡಿವೀಜ್ಯನ್ ಮುನ್‌ಸೀಫರುಗಳ ಫೈಸಲ್‌ಮೇಲಿನ ಅಪ್ಪೀಲ್‌ಗಳನ್ನು ಹಿಡಿಯತಕ್ಕದ್ದೆಂತಲೂ ಅದನ್ನನುಸರಿಸಿ ಚೀಫ್ ಕೋರ್ಟ್ ರೆಗ್ಯುಲೇಷನ್ ಬದಲಾಯಿಸಬೇಕೆಂತಲೂ ಗವರ್ಮೆಂಟಿನವರು ತೀರ್ಮಾನಿಸಿ ಇರುತ್ತಾರೆ. ಈ ಏರ್ಪಾಡಿನಿಂದ ಮೊಕರರಾಗುವ ಸೆಷನ್ಸ್ ಜಡ್ಜ್‌ಯವರು ಆಯಾಯ ಡಿಸ್ಟ್ರಿಕ್ಟಿನಸೆಷನ್ಸ್ ಮೊಕದ್ದಮೆಗಳನ್ನು ಆಯಾಯ ಡಿಸ್ಟ್ರಿಕ್ಟಿನ ಕಸಬೆಗಳಲ್ಲಿ ಎರಡು ಅಥವಾ ಮೂರು ತಿಂಗಳಿಗೆ ಒಂದಾವರ್ತಿದರ್ಯಾಫ್ತ ಮಾಡುವದಕ್ಕೆ ಅನುಕೂಲಿಸುತ್ತೆ. ಬಹಳ ದೂರದಿಂದ ಪ್ರಯಾಣ ಮಾಡಿಕೊಂಡು ಬರಬೇಕಾಗುವ ಸಾಕ್ಷಿಗಳ ಅನಾನುಕೂಲವು ನಿವಾರಣೆಯಾಗುತ್ತೆ ಮತ್ತು ಚೀಫ್ ಕೋರ್ಟಿನ ಜಡ್ಜ್‌ರಿಯರಿಗೆ ಆ ಕೋರ್ಟಿಗೆ ಅಧೀನವಾದ ಕೋರ್ಟುಗಳ ಮೇಲ್ವಿಚಾರಣೆಮಾಡುವದಕ್ಕೂ ಅವಕಾಶ ಉಂಟಾಗುತ್ತೆ. ಏವಂಚ ಈ ಏರ್ಪಾಡಿನಿಂದ ನ್ಯಾಯ ವಿಮರ್ಶೆಯೂ ಮುಖ್ಯವಾಗಿ ಕ್ರಿಮಿನಲ್ ಮೊಕದ್ದಮೆಗಳ ವಿಮರ್ಶೆಯೂ ಸುಖಕರವಾಗುತ್ತೆ.

ಫಾರೆಸ್ಟ್.—ಕಾಡು ಬೆಳಸುವದಕ್ಕೆ ಅನುಕೂಲವಾದ ಎಲ್ಲಾ ಪ್ರದೇಶಗಳನ್ನೂ ಖೈದು ಮಾಡುವದು, ಸ್ವಭಾವವಾಗಿ ಬೆಳದು ವೃದ್ಧಿಯಾಗೋಣ ಮಾತ್ರವಲ್ಲದೆ ಬೀಜ ಸೊಸಿ ಮುಂತಾದ್ದು ನಾಟಿ, ಮನುಷ್ಯ ಪ್ರಯತ್ನದಿಂದ ಅನ್ವುಗಳನ್ನು ಅಭಿವೃದ್ಧಿ ಪಡಿಸುವದು, ಮನಸ್ವೀ ಕತರಾವಣಿಗಳನ್ನು ನಿರೋಧಿಸಿ ಒಂದು ಕ್ರಮವರಿತು ಕಡಿಯುವಂತೆ ಮಾಡುವದು ಕೃಷಿಜೀವಿಗಳಿಗೆ ಅವಶ್ಯಕವಾದ ವಿಷಯಗಳಲ್ಲಿ ಅನುಕೂಲ ಪಡಿಸಿ ಅವರ ದನ ಕರುಗಳಿಗೆ ಮೇವು ಬದಗಿಸುವಂತೆ ಮಾಡುವದು, ಮತ್ತು ಯುವಾಗ್ಯೂ ತಪ್ಪದೆ ಸಂದಲ್ ಸರಬರಾಯಿ ಆಗುವಂತೆ ಮಾಡುವದು, ಇವುಗಳೇ ಈ ಇಲಾಖೆಯ ಮುಟ್ಟೋದ್ದೇ ೀಕಗಳಾಗಿವೆ.

ಕಾಡಿನ ಸಂರಕ್ಷಣೆಯು ದೇಶಕ್ಕೆ ಬಹಳ ಪ್ರಯೋಜನಕರವಾದದ್ದು. ಪ್ರಕೃತದಲ್ಲಿ ಕೊಂಚಮಟ್ಟಿಗೆ ಕೆಲವುಕಾಲ ಅನಾನುಕೂಲವಾದಾಗ್ಯೂ ಉತ್ತರೋತ್ತರ ಅದರಿಂದ ನಿಸ್ಸಂದೇಹವಾಗಿ ಅನೇಕವಾದ ಪ್ರಯೋಜನಗಳು ಉಂಟಾಗುವವು. ಕಳೆದ ಸಂವತ್ಸರದಲ್ಲಿ ಅಮಾನೀ ಜಂಗಲ್‌ಗಳಿಗೆ 231 ಚದರ ಮೈಲ್‌ಗಳ ವಿಸ್ತಾರವುಳ್ಳ ಸ್ವಲ್ಪ ಹೆಚ್ಚು ಕಡಿಮೆ ಉತ್ತಮವಾದ ಪ್ರದೇಶವು ಸೇರಿಸಲ್ಪಟ್ಟಿತು.

2883 ಎಕರೆ ಅಂದರೆ ಸುಮಾರು 4 ಚದರ ಮೈಲ್‌ಗಳ ಪ್ರದೇಶದಲ್ಲಿ ಚೌಬೀನೆ ಮತ್ತು ಸೌದೆಗೆ ಲಾಯಕ್ಕಾದ ಸೊಸಿಗಳು ನಾಟಿಸಲ್ಪಟ್ಟಿದೆ.

ಹೀಗೆ ಫಾರೆಸ್ಟ್ ಉತ್ಪತ್ತಿಯನ್ನು ಮತ್ತೂ ಹೆಚ್ಚಾಗಿ ಉತ್ಪತ್ತಿ ಆಗುವಹಾಗೆ ಜಂಗಲುಗಳನ್ನ ಅಭಿವೃದ್ಧಿಪಡಿಸುವಲ್ಲಿ ರೈತರುಗಳಿಗೆ ಉಪಯುಕ್ತವಾದ ವಿಷಯಗಳನ್ನು ಉದಾಸೀನ ಮಾಡಿರುವದಿಲ್ಲ. ರೈತರುಗಳು ಸ್ವಂತ ಉಪಯೋಗಕ್ಕೆ ತೆಗದುಕೊಂಡು ಹೋಗುವ ಸೌದೆಗೂ ಮತ್ತು ಉಳಿಸಿಕೊಳ್ಳಲ್ಪಡದೆ ಯಿರತಕ್ಕ ಮರಗಳಿಗೂ ಮತ್ತು ಅವರ ವ್ಯವಸಾಯಕ್ಕೆ ಅವಶ್ಯಕವಾದ ಸೊಪ್ಪುಸೌದೆ ಮುಂತಾದ ಪದಾರ್ಥಕ್ಕೂ ಅವರು ಏನೂ ಕೊಡಬೇಕಾಗಿರುವದಿಲ್ಲ. ಕಟ್ಟಡಗಳು ಕಟ್ಟುವ ಉದ್ದಿಶ್ಯ ರಿಯಾಯತಿ ದರದಲ್ಲಿ ಮರಮುಟ್ಟುಗಳನ್ನೂ ಬಿದರನ್ನೂ ಸಹ ಅವರು ಪಡೆಯಬಹುದು

ಫಾರೆಸ್ಟ್ ಹುಟ್ಟುವಳಿಗೆ ಮುಖ್ಯಾಧಾರವಾದ ಶ್ರೀಗಂಧವನ್ನು ಕೇವಲ ಮುತವರ್ಜಿಯಿಂದ ವೃದ್ಧಿಮಾಡುತ್ತಲಿದೆ. ವಿಸ್ತಾರವಾದ ಪ್ರದೇಶಗಳಲ್ಲಿ ಈ ಬೆಲೆಯುಳ್ಳ ಗಿಡವನ್ನು ಬೆಳೆಸುವ ಕೆಲಸವು ಕ್ರಮವಾದ ನಿಗೇವಾನಿ ಮತ್ತು ಜಾಗರೂಕತೆಯಿಂದ ನಡೆಸಲ್ಪಡುತ್ತಲಿದೆ. ಸ್ವಭಾವವಾಗಿ ಶ್ರೀಗಂಧ ವಿಶೇಷವಾಗಿ ಸುಟ್ಟು ಇದ್ದಪ್ರಾಂತ್ಯಗಳನ್ನು

\993

ಕೆಡಕಿಗೆ ಒಳಪಡದಂತೆ ಬೈದು ಮಾಡಿದೆ. ಮತ್ತು ಪೂರ್ವದಲ್ಲಿ ಸಂದಲ್ ಅಭಿವೃದ್ಧಿಗೂ, ಅದರ ನಿಗೇವಾನಿಗೂ, ಏರ್ಪಟ್ಟಿದ್ದ ಮಣೇಗಾರ್ರ ಶಿಬ್ಬಂದಿಯನ್ನ ಪುನಹ ಸ್ಥಾಪಿಸಿದೆ. ಕಳೆದ ಸಂವತ್ಸರದಲ್ಲಿ ಸಂದಲ್ ಜಮೀವಣಿಯು ಹಿಂದಿನ ಸಾಲುಗಳಲ್ಲಿ ಆಯಾಯ ಸ್ಥಳಗಳಲ್ಲಿ ಮಾರತುಹೋಗಿ ಬಿಟ್ಟುಯಿದ್ದ ಸಂದಲ್ ಬುಡ ಬೇರುಗಳನ್ನ ಕೋಲಿಗೆ ತಂದದ್ದರಿಂದ ಜಾಸ್ತಿಯಾಯಿತು. ಕಳೆದ 2 ಸಂವತ್ಸರಗಳಲ್ಲಿ ಸಂದಲಿಗೆ ಗಿರಾಕಿ ಜಾಸ್ತಿಯಾಗಿದೆ. ಈಚಿಗೆ ಆಗಿರುವ ಜಾಸ್ತೀದರವೇ ಇದಕ್ಕೆ ದೃಷ್ಟಾಂತವಾಗಿದೆ.

ಫಾರೆಸ್ಟ್ ಇಲಾಖೆಯಲ್ಲಿ ತಾಬೇದಾರ್ ನೌಕರಮಾನೇರಿಗೆ ಇತರ ಇಲಾಖೆಗಳಲ್ಲಿ ಇವರ ಸಮಾನ ದರ್ಜೇ ನೌಕರರಿಗೆ ಇರುವಂತೆ ತಲಬು ಜಾಸ್ತಿ ಮಾಡಲ್ಪಟ್ಟಿರುತ್ತೆ. ಹಾಗೆಯೇ ಈ ಇಲಾಖೆಯ ಕೆಲಸಗಳು ವಿಸ್ತಾರವಾಗಿ ನಡಿಯುವದ್ದರಿಂದ ಶಿಬ್ಬಂದಿಯನ್ನು ಬಲಪಡಿಸಿದ್ದಾಯಿತು.

ಡ್ಯಾರಾಡ್ಯೂನ್ ಎಂಬ ಸ್ಥಳದಲ್ಲಿ ಇರುವ ಫಾರೆಸ್ಟ್ ವಿದ್ಯಾ ಶಾಲೆಯಲ್ಲಿ ತರಬೇಕಾಗುವ ಉದ್ದಿಶ್ಯ ಡಿಗ್ರೀ ಯೋಗ್ಯತಾ ಬಹುಮಾನವನ್ನು ಪಡೆದ 3 ಜನರನ್ನು ಕಳುಹಿಸಿ ಕೊಟ್ಟಿದೆ. ಇವರುಗಳನ್ನ ಈ ಇಲಾಖೆಯಲ್ಲಿ ಉತ್ತಮಾಧಿಕಾರಕ್ಕೆ ತರುವ ಅಭಿಪ್ರಾಯವಿದೆ. ಹೀಗೆ ಸ್ವಲ್ಪ ಕಾಲಕ್ಕೆ ಮುಂಚೆ ತೇರ್ಗಡೆಯಾಗಿ ಬಂದ 3 ಜನರನ್ನು ಸಬ್ ಅಸಿಸ್ಟೆಂಟ್ ಕಂಸರ್ವೇಟರ್ ಅಧಿಕಾರಕ್ಕೆ ನೇಮಿಸಿ ಇದೆ. ಈಗ ಈ ಇಲಾಖೆಯಲ್ಲಿ ಇರತಕ್ಕ 3 ಜನ ರೇಂಜರುಗಳು ಸಹ ಡ್ಯಾರಾಡ್ಯೂನ್ ಫಾರೆಸ್ಟ್ ಸ್ಕೂಲಿನಲ್ಲಿ ಶಿಕ್ಷಿತರಾಗುತ್ತ ಲಿಧಾರೆ.

ಆನೆ ಬಂಗಡಿ ಖೆಡ್ಡಾ.—ಬಂಗಡಿಗಳಿಗಾಗಿ 66,000 ರೂಪಾಯಿಗಳು ಖರ್ಚಾಗಿವೆ. ಈ ವೊಬಲಗಿನಲ್ಲಿ ಬಂಗಡಿ ಖೆಡ್ಡಾ ಉದ್ದಿಶ್ಯ ಡ್ಯಾಕಾ ಪಟ್ಟಣದಿಂದ ತರಿಸಿದ 12 ಕುಮ್ಕಿಕ್ಕೆ ಆನೆಗಳ ಬೆಲೆ 30,000 ರೂಪಾಯಿ ಸೇರಿರುತ್ತೆ. ಒಟ್ಟು 51 ಆನೆಗಳು ಹಿಡಿಯಲ್ಪಟ್ಟವು. ಈಪೈಕಿ 26,680 ರೂಪಾಯಿ ಬೆಲೆಬಾಳುವ 31 ಆನೆಗಳನ್ನು ಇಟ್ಟು ಕೊಂಡದ್ದಾಯಿತು. ಇನ್ನು 2 ತಿಂಗಳಲ್ಲಿಯೇ ಪುನಶ್ಚ ಆನೆಗಳನ್ನು ಹಿಡಿಯುವ ನಿರೀಕ್ಷಣೆಯಿದೆ. ಆಗ ಸಿಕ್ಕುವ ಆನೆಗಳಪೈಕಿ ಇಟ್ಟುಕೊಳ್ಳಬಹುದಾದ 25 ಆನೆಗಳ ಕಿಮ್ಮತ್ತು ಅಂದಾಜು ಸುಮಾರು 25,000 ರೂಪಾಯಿ ಆಗುತ್ತೆ. ಆದ್ದರಿಂದ ಈ ಭಾಗದಲ್ಲಿ ಈ ಸಂವತ್ಸರ ನಿಕರವಾಗಿ ಆದಾಯ ಉಂಟಾಗುವದು; ಆದರೆ ಈ ಆನೆ ಬಂಗಡಿ ಖೆಡ್ಡಾರೀಗಳನ್ನ ನಡಿಸುವದರಲ್ಲಿ ರೈತರಿಗೆ ಕಾಡಾನೆಗಳಿಂದ ಸಂಭವಿಸುವ ನಷ್ಟವನ್ನು ನಿವಾರಣೆ ಮಾಡುವದು ಬಂದು ಮುಖ್ಯವಾದ ಉದ್ದೇಶವಾಗಿದೆ. ಈ ವೈಗಗಳು ಒಹಳವಾಗಿ ವೃದ್ಧಿಹೊಂದಿ ಮೈಸೂರು, ಕಡೂರು ಮತ್ತು ಶಿವಮೊಗ್ಗ ಈ ಪ್ರಾಂತ್ಯಗಳಲ್ಲಿ ಪೈರಿಗೆ ನಷ್ಟವನ್ನು ಉಂಟುಮಾಡುತ್ತಿರುವಂತೆ ತಿಳಿಯಬರುತ್ತೆ. ಮೈಸೂರಲ್ಲಿ ಉಂಟಾಗುವ ಅನುಭವದಿಂದ ಬಾಧಕಕರಗಳಾಗಿರುವ ಈ ವೈಗಗಳ ಮೂಲಕ ಆದಾಯವನ್ನ ಪಡೆಯುವಂತೆ ಮಾಡಬಹುದಾಗಿರುತ್ತೆ.

ವಿದ್ಯಾಭ್ಯಾಸ.—ವಿದ್ಯಾಭ್ಯಾಸವು ಎಲ್ಲಾಭಾಗದಲ್ಲಿಯೂ ವೃದ್ಧಿಯಾಗುತಲಿದೆ. ಮುಖ್ಯವಾಗಿ ದೇಶಭಾಷೆಯಲ್ಲಿಯೂ ಮತ್ತು ಆರಂಭ ಶಿಕ್ಷೆಯಲ್ಲಿಯೂ ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿಯಿದೆ. ಈ ಇಲಾಖೆಯ ಈ ಸಂವತ್ಸರದ ಲಿಪ್ಪ್ರಕಾರ 150ರಿಂದ 300ರವರಿವಿಗೂ ಓದತಕ್ಕವರು ಇರುವಂಥಾ ತಾಲ್ಲೂಕು ಪಾಠಶಾಲೆಗಳು 19 ಇವೆ. ಇನ್ನೂ ಇಪ್ಪತ್ತೊಂಭತ್ತರಲ್ಲಿ 100ರಿಂದ 150ರವರಿಗೂ ಹುಡುಗರು ಓದುತ್ತಾರೆ. ಉತ್ತಮಸ್ಥಿತಿಯಲ್ಲಿದ್ದಂಥಾ ಹೋಬಳೀ ಸ್ಕೂಲ್‌ಗಳನ್ನ ತಾಲ್ಲೂಕು ಬ್ರಾಂಚ್ ಸ್ಕೂಲ್‌ಗಳಾಗಿಮಾಡಿದ್ದು ಬಹಳಜನ ಸಮ್ಮತವಾಗಿದೆ. ಈಗಾಗಲೇ ಈತರಹೇವ ಪಾಠಶಾಲೆಗಳು 100ಕ್ಕಿಂತಾ ಹೆಚ್ಚಾಗಿದೆ. ಇವ್ರುಗಳಲ್ಲಿ ದೊಡ್ಡದಾವ ಪಾಠಶಾಲೆಗಳು ತಾಲ್ಲೂಕು ಕಸಬೆಯಲ್ಲಿರತಕ್ಕ ಪಾಠಶಾಲೆಗಿಂತಾ ನಿಕೃಷ್ಟವಾಗಿಲ್ಲ. 100ರಿಂದಾ 300ರವರಿವಿಗೂ ಹುಡುಗರು ಸೇರಿರುತ್ತಾರೆ. ಮತ್ತು ಅಂಥಾ ಸ್ಕೂಲ್‌ಗಳು ಇನ್ನೂ ಅನೇಕವಾಗಿಆಗಬೇಕಾದ್ದಕ್ಕೆ ಜನಗಳು ಅಪೇಕ್ಷೆಪಟ್ಟು ಪ್ರಾರ್ಥಿಸುತ್ತಾ ಇಧಾರೆ. ಆದ್ದರಿಂದಾ ಪ್ರಥಮದಲ್ಲಿ ಆರಂಭ ವಿದ್ಯಾಶೀಕ್ಷೆಗಾಗಿ ನಿರ್ದೇಶಿಸಲ್ಪಟ್ಟಿದ್ದ ಲೋಕಲ್‌ಫಂಡನ್ನು ತಾಲ್ಲೂಕು ಕಸಬೆಯಲಿರತಕ್ಕ ವಿದ್ಯಾಶಾಲೆಗಳ ಖರ್ಚುಗಳಿಗೆ ವ್ಯಯಪಡಿಸದೆ ಮೇಲೆ ಹೇಳಿದಂತೆ ಪ್ರತ್ಯೇಕಿಸ ಬೇಕಾಯಿತು.

ಈಗ ಇರತಕ್ಕ ಕಾಲೇಜ್‌ಗಳಿಂದಲೂ ಡಿಸ್ಟ್ರಿಕ್ಟ್ ಕಸಬೆಯಲ್ಲಿರತಕ್ಕ ಹೈಸ್ಕೂಲ್‌ಗಳಿಂದಲೂ ತಾಲ್ಲೂಕುಗಳಲ್ಲಿರತಕ್ಕ ಮ್ಯೂನಿಸಿಪಲ್ ಸ್ಕೂಲ್‌ಗಳಿಂದಲೂ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಸಾಕಾಷ್ಟು ಅನುಕೂಲ್ಯತೆ ಇರುತ್ತೆ. ಯೂನಿವರ್ಸಿಟಿ ಪರೀಕ್ಷೆಗಳ ಫಲಿತಾರ್ಥವು ಸಮರ್ಪಕವಾಗಿದೆ. ಮತ್ತು ಇದ ಈ ಶಿಮೆಯು ಇಂಗ್ಲಿಷ್ ಪಾಠಶಾಲೆಗಳಲ್ಲಿ ಪ್ರೌಢ ಪರೀಕ್ಷೆ ಕೊಡುವದಕ್ಕೆ ಯೋಗ್ಯತೆ ಉಂಟಾಗುವ ಹಾಗೆ ಶೀಕ್ಷೆ ಯಾಗುತ್ತೆಂಬುವದನ್ನ ಸ್ಪಷ್ಟವಾಗಿ ತಿಳಿಯುತ್ತೆ.